भारत का राजपत्र
The Gazette of India

ಭಾರತ ರಾಜಪತ್ರ

**(Extraordinary)**

(ವಿಶೇಷ ಸಂಚಿಕೆ)

**भाग IX अनुभाग 1**

**PART IX SECTION 1**

**ಭಾಗ IX ವಿಭಾಗ 1**

**प्राधिकार से प्रकाशित**

**Published by Authority**

**ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ**

| | | |
|---|---|---|
| सं 1, नई दिल्ली, शुक्रवार, मई 17, 2024<br>No.1, New Delhi, Friday, May 17, 2024<br>ನಂ.1, ನವದೆಹಲಿ, ಶುಕ್ರವಾರ, ಮೇ 17, 2024 | वैशाख 09, 1946 (शक)<br>Vaishakha 09, 1946 (saka)<br>ವೈಶಾಖ 09, 1946 (ಶಕ) | खंड.55<br>Vol. 55<br>ಸಂಪುಟ.55 |

**Ministry of Law and Justice**

(Legislative Department)

New Delhi, 17th May, 2024

**ಕಾನೂನು ಮತ್ತು ನ್ಯಾಯ ಮಂತ್ರಾಲಯ**

(ವಿಧಾಯೀ ಇಲಾಖೆ)

**ನವದೆಹಲಿ, 17ನೇ ಮೇ, 2024**

The Translation in Kannada of the following Acts, namely:- (1) THE DISASTER MANAGEMENT ACT, 2005 (NO.53 OF 2005) (2) THE STREET VENDORS (PROTECTION OF LIVELIHOOD AND REGULATION OF STREET VENDING) ACT, 2014 (NO.7 OF 2014) (3)THE COMMERCIAL COURTS ACT, 2015 (NO.4 OF 2016) (4) THE TRIBUNALS REFORMS ACT, 2021 (NO.33 OF 2021) (5) THE SURROGACY (REGULATION) ACT, 2021 (NO.47 OF 2021) - are hereby published under the authority of the President and shall be deemed to be authoritative text thereof in Kannada under clause (a) of section 2 of the Authoritative Texts (Central Laws) Act, 1973 (50 of 1973).

**ಬೀದಿಬದಿ ವ್ಯಾಪಾರಿಗಳ (ಜೀವನೋಪಾಯ ಸಂರಕ್ಷಣೆ ಮತ್ತು ಬೀದಿಬದಿ ವ್ಯಾಪಾರ ವಿನಿಯಮನ) ಅಧಿನಿಯಮ, 2014**

**(2014ರ ಸಂಖ್ಯೆ 7)**

[4ನೇ ಮಾರ್ಚ್, 2014.]

ನಗರ ಬೀದಿಬದಿ ವ್ಯಾಪಾರಿಗಳ ಹಕ್ಕುಗಳನ್ನು ಸಂರಕ್ಷಿಸುವ ಮತ್ತು ಬೀದಿಬದಿ ವ್ಯಾಪಾರ ಚಟುವಟಿಕೆಗಳನ್ನು ವಿನಿಯಮಿಸುವ ಮತ್ತು ಅದಕ್ಕೆ ಸಂಬಂಧಿಸಿದ ಅಥವಾ ಅದಕ್ಕೆ ಪ್ರಾಸಂಗಿಕವಾದ ವಿಷಯಗಳಿಗಾಗಿ ಉಪಬಂಧ ಕಲ್ಪಿಸುವ ಅಧಿನಿಯಮ.

ಇದು, ಭಾರತ ಗಣರಾಜ್ಯದ ಅರವತ್ತೈದನೇ ವರ್ಷದಲ್ಲಿ ಸಂಸತ್ತಿನಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು:–

## ಅಧ್ಯಾಯ I

## ಪ್ರಾರಂಭಿಕ

**1. ಚಿಕ್ಕ ಹೆಸರು, ವ್ಯಾಪ್ತಿ, ಪ್ರಾರಂಭ ಮತ್ತು ಉಪಬಂಧಗಳು.–** (1) ಈ ಅಧಿನಿಯಮವನ್ನು, ಬೀದಿಬದಿ ವ್ಯಾಪಾರಿಗಳ (ಜೀವನೋಪಾಯ ಸಂರಕ್ಷಣೆ ಮತ್ತು ಬೀದಿಬದಿ ವ್ಯಾಪಾರ ವಿನಿಯಮನ) ಅಧಿನಿಯಮ, 2014 ಎಂದು ಕರೆಯತಕ್ಕದ್ದು.

(2) ಇದು, [*ಜಮ್ಮು ಮತ್ತು ಕಾಶ್ಮೀರ ರಾಜ್ಯವನ್ನು ಹೊರತುಪಡಿಸಿ] ಇಡೀ ಭಾರತಕ್ಕೆ ವ್ಯಾಪ್ತವಾಗುತ್ತದೆ.

(3) ಇದು, ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಂದು ಜಾರಿಗೆ ಬರತಕ್ಕದ್ದು; ಮತ್ತು ಬೇರೆಬೇರೆ ರಾಜ್ಯಗಳಿಗಾಗಿ ಬೇರೆಬೇರೆ ದಿನಾಂಕಗಳನ್ನು ಗೊತ್ತುಪಡಿಸಬಹುದು ಮತ್ತು ಈ ಅಧಿನಿಯಮದ ಪ್ರಾರಂಭಕ್ಕೆ ಯಾವುದೇ ಉಪಬಂಧದಲ್ಲಿ ಮಾಡಲಾದ ಯಾವುದೇ ಉಲ್ಲೇಖವನ್ನು ಯಾವುದೇ ರಾಜ್ಯಕ್ಕೆ ಸಂಬಂಧಿಸಿದಂತೆ ಆ ರಾಜ್ಯದಲ್ಲಿ ಆ ಉಪಬಂಧವು ಜಾರಿಗೆ ಬರುವುದಕ್ಕೆ ಮಾಡಿದ ಉಲ್ಲೇಖವೆಂದು ಅರ್ಥೈಸತಕ್ಕದ್ದು.

(4) ಈ ಅಧಿನಿಯಮದ ಉಪಬಂಧಗಳು, ರೈಲ್ವೆ ಅಧಿನಿಯಮ, 1989 (1989 ರ 24) ರ ಮೇರೆಗೆ ರೈಲ್ವೆಗಳ ಒಡೆತನ ಮತ್ತು ನಿಯಂತ್ರಣ ಹೊಂದಿರುವ ಯಾವುದೇ ಭೂಮಿಗೆ, ಆವರಣಗಳಿಗೆ ಮತ್ತು ರೈಲುಗಳಿಗೆ ಅನ್ವಯವಾಗತಕ್ಕದ್ದಲ್ಲ.

**2. ಪರಿಭಾಷೆಗಳು.–** (1) ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

(ಎ) ರಾಜ್ಯಕ್ಕೆ ಸಂಬಂಧಪಟ್ಟಂತೆ "ಸಮುಚಿತ ಸರ್ಕಾರ" ಎಂದರೆ:–

(i) ವಿಧಾನಮಂಡಲ ಹೊಂದಿಲ್ಲದ ಒಕ್ಕೂಟ ರಾಜ್ಯಕ್ಷೇತ್ರಕ್ಕೆ ಸಂಬಂಧಪಟ್ಟ ವಿಷಯಗಳ ಸಂಬಂಧದಲ್ಲಿ, ಕೇಂದ್ರ ಸರ್ಕಾರ;

(ii) ವಿಧಾನಮಂಡಲವನ್ನು ಹೊಂದಿರುವ ಒಕ್ಕೂಟ ರಾಜ್ಯಕ್ಷೇತ್ರಗಳಿಗೆ ಸಂಬಂಧಪಟ್ಟ ವಿಷಯಗಳ ಸಂಬಂಧದಲ್ಲಿ, ರಾಷ್ಟ್ರ ರಾಜಧಾನಿ ದೆಹಲಿ ರಾಜ್ಯಕ್ಷೇತ್ರದ ಅಥವಾ ಸಂದರ್ಭಾನುಸಾರ ಅಥವಾ ಪುದುಚೆರಿಯ ಒಕ್ಕೂಟ ರಾಜ್ಯಕ್ಷೇತ್ರದ ಸರ್ಕಾರ;

(iii) ಒಂದು ರಾಜ್ಯಕ್ಕೆ ಸಂಬಂಧಪಟ್ಟ ವಿಷಯಗಳಲ್ಲಿ ರಾಜ್ಯ ಸರ್ಕಾರ;

(ಬಿ) "ಧಾರಣ ಸಾಮರ್ಥ್ಯ" ಎಂದರೆ, ವ್ಯಾಪಾರ ಮಾಡುವ ಯಾವುದೇ ವಲಯದಲ್ಲಿ ಸ್ಥಳಾವಕಾಶ ಕಲ್ಪಿಸಿಕೊಡಬಹುದಾದ ಮತ್ತು ಪಟ್ಟಣ ಮಾರಾಟಗಾರರ ಸಮಿತಿಯ ಶಿಫಾರಸ್ಸುಗಳ ಮೇರೆಗೆ ಸ್ಥಳೀಯ ಪ್ರಾಧಿಕಾರವು ನಿರ್ಧರಿಸಲಾಗಿರುವಂಥ ಬೀದಿಬದಿ ವ್ಯಾಪಾರಿಗಳ ಗರಿಷ್ಠ ಸಂಖ್ಯೆ;

---

* ಅಧಿಸೂಚನೆ ಸಂಖ್ಯೆ:ಎಸ್.ಒ 3912(ಇ), ದಿನಾಂಕ:30ನೇ ಅಕ್ಟೋಬರ್ 2019ರ ಪ್ರಕಾರ ಈ ಅಧಿನಿಯಮವನ್ನು ಜಮ್ಮು ಮತ್ತು ಕಾಶ್ಮೀರ ಒಕ್ಕೂಟ ರಾಜ್ಯಕ್ಷೇತ್ರಕ್ಕೆ ಮತ್ತು ಲಡಾಖ್ ಒಕ್ಕೂಟ ರಾಜ್ಯಕ್ಷೇತ್ರಕ್ಕೂ ಅನ್ವಯವಾಗುವಂತೆ ಮಾಡಲಾಗಿದೆ.

(ಸಿ) "ಸ್ಥಳೀಯ ಪ್ರಾಧಿಕಾರ" ಎಂದರೆ, ಸಂದರ್ಭಾನುಸಾರ, ಪೌರಸಭಾ ನಿಗಮ ಅಥವಾ ಮುನ್ಸಿಪಲ್ ಕೌನ್ಸಿಲ್ ಅಥವಾ ಯಾವುದೇ ಹೆಸರಿನಿಂದ ಕರೆಯಲಾಗುವ ನಗರ ಪಂಚಾಯಿತಿ ಅಥವಾ ದಂಡು ಪ್ರದೇಶ ಅಧಿನಿಯಮ, 2006 (2006 ರ 41)ರ 47ನೇ ಪ್ರಕರಣದ ಮೇರೆಗೆ ಗೊತ್ತುಪಡಿಸಲಾದ ದಂಡು ಪ್ರದೇಶ ಮಂಡಳಿ ಅಥವಾ ನಾಗರಿಕ ಪ್ರದೇಶ ಸಮಿತಿ ಅಥವಾ ನಾಗರಿಕ ಸೇವೆಗಳನ್ನು ಒದಗಿಸುವ ಅಥವಾ ಬೀದಿ ವ್ಯಾಪಾರವನ್ನು ವಿನಿಯಮಿಸುವ ಯಾವುದೇ ನಗರ ಅಥವಾ ಪಟ್ಟಣದಲ್ಲಿ ಸ್ಥಳೀಯ ಪ್ರಾಧಿಕಾರವಾಗಿ ಕಾರ್ಯನಿರ್ವಹಿಸಲು ಹಕ್ಕುಳ್ಳ ಅಂಥ ಇತರ ನಿಕಾಯ ಮತ್ತು ಇದರಲ್ಲಿ ಆ ನಗರ ಅಥವಾ ಪಟ್ಟಣದಲ್ಲಿ ಭೂ ಬಳಕೆಯನ್ನು ವಿನಿಯಮಿಸುವ "ಯೋಜನಾ ಪ್ರಾಧಿಕಾರ"ವು ಒಳಗೊಳ್ಳುತ್ತದೆ;

(ಡಿ) "ಸಂಚಾರಿ ವ್ಯಾಪಾರಿಗಳು" ಎಂದರೆ, ತಮ್ಮ ಸರಕುಗಳನ್ನು ವ್ಯಾಪಾರ ಮಾಡುವ ಸಲುವಾಗಿ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಸಂಚರಿಸುತ್ತ ಗೊತ್ತುಪಡಿಸಿದ ಪ್ರದೇಶದಲ್ಲಿ ವ್ಯಾಪಾರ ಚಟುವಟಿಕೆಗಳನ್ನು ಮಾಡುವ ಮತ್ತು ಸೇವೆಗಳನ್ನು ಒದಗಿಸುವ ವ್ಯಾಪಾರಿಗಳು;

(ಇ) "ಸ್ವಾಭಾವಿಕ ಮಾರುಕಟ್ಟೆ" ಎಂದರೆ, ಪಟ್ಟಣ ವ್ಯಾಪಾರ ಸಮಿತಿಯ ಶಿಫಾರಸ್ಸುಗಳ ಮೇರೆಗೆ ವ್ಯಾಪಾರ ಮಾಡುವವರು ಮತ್ತು ಕೊಳ್ಳುವವರು, ಉತ್ಪನ್ನಗಳನ್ನು ವ್ಯಾಪಾರ ಮಾಡುವುದಕ್ಕಾಗಿ ಮತ್ತು ಖರೀದಿ ಮಾಡುವುದಕ್ಕಾಗಿ ಅಥವಾ ಸೇವೆಗಳನ್ನು ಒದಗಿಸುವುದಕ್ಕಾಗಿ ರೂಢಿಗತವಾಗಿ ಒಟ್ಟಾಗಿ ಸೇರುವಂಥ ಮತ್ತು ಸ್ಥಳೀಯ ಪ್ರಾಧಿಕಾರವು ಹಾಗೆಂದು ನಿರ್ಧರಿಸಲಾಗಿರುವಂಥ ಮಾರುಕಟ್ಟೆ;

(ಎಫ್) "ಅಧಿಸೂಚನೆ" ಎಂದರೆ, ರಾಜಪತ್ರದಲ್ಲಿ ಪ್ರಕಟಿಸಲಾದ ಅಧಿಸೂಚನೆ ಮತ್ತು "ಅಧಿಸೂಚಿಸು" ಎಂಬ ಪದವನ್ನು ತದನುಸಾರವಾಗಿ ಅರ್ಥೈಸತಕ್ಕದ್ದು;

(ಜಿ) "ಯೋಜನಾ ಪ್ರಾಧಿಕಾರ" ಎಂದರೆ, ಸಂದರ್ಭಾನುಸಾರ ಪಟ್ಟಣ ಮತ್ತು ಗ್ರಾಮಾಂತರ ಯೋಜನಾ ಅಧಿನಿಯಮದ ಅಥವಾ ನಗರಾಭಿವೃದ್ಧಿ ಅಧಿನಿಯಮದ ಅಥವಾ ಪೌರಸಭಾ ಅಧಿನಿಯಮದ ಮೇರೆಗೆ ಕಾನೂನುಸಮ್ಮತವಾಗಿ ಜಾರಿಗೊಳಿಸಬಹುದಾದ ಯಾವುದೇ ಮಹಾಯೋಜನೆ ಅಥವಾ ಅಭಿವೃದ್ಧಿ ಯೋಜನೆ ಅಥವಾ ವಲಯ ಯೋಜನೆ ಅಥವಾ ಲೇಔಟ್ ಯೋಜನೆ ಅಥವಾ ಯಾವುದೇ ಇತರ ಪ್ರಾದೇಶಿಕ ಯೋಜನೆಯಲ್ಲಿ ಯಾವುದೇ ನಿರ್ದಿಷ್ಟ ಕಾರ್ಯಚಟುವಟಿಕೆಗಳಿಗಾಗಿ ಪ್ರದೇಶಗಳ ನಿಖರ ವ್ಯಾಪ್ತಿಯನ್ನು ಪರಿಭಾಷಿಸುವುದಕ್ಕಾಗಿ, ಭೂ ಬಳಕೆಯನ್ನು ವಿನಿಯಮಿಸುವುದಕ್ಕಾಗಿ ಹೊಣೆಗಾರಿಕೆ ಹೊಂದಿರುವುದೆಂದು ಸಮುಚಿತ ಸರ್ಕಾರವು ಗೊತ್ತುಪಡಿಸಿದ ನಗರಾಭಿವೃದ್ಧಿ ಪ್ರಾಧಿಕಾರ ಅಥವಾ ಯಾವುದೇ ನಗರ ಅಥವಾ ಪಟ್ಟಣದಲ್ಲಿರುವ ಯಾವುದೇ ಇತರ ಪ್ರಾಧಿಕಾರ;

(ಹೆಚ್) "ನಿಯಮಿಸಲಾದುದು" ಎಂದರೆ, ಸಮುಚಿತ ಸರ್ಕಾರವು, ಈ ಅಧಿನಿಯಮದ ಮೇರೆಗೆ ರಚಿಸಿದ ನಿಯಮಗಳ ಮೂಲಕ ನಿಯಮಿಸಲಾದುದು;

(ಐ) "ಅನುಸೂಚಿ" ಎಂದರೆ, ಈ ಅಧಿನಿಯಮಕ್ಕೆ ಅನುಬಂಧಿಸಲಾದ ಅನುಸೂಚಿ;

(ಜೆ) "ಸ್ಕೀಮ್" ಎಂದರೆ, 38ನೇ ಪ್ರಕರಣದ ಮೇರೆಗೆ ಸಮುಚಿತ ಸರ್ಕಾರವು ರೂಪಿಸಿದ ಸ್ಕೀಮ್;

(ಕೆ) "ಸ್ಥಾಯೀ ವ್ಯಾಪಾರಿಗಳು" ಎಂದರೆ, ನಿರ್ದಿಷ್ಟಪಡಿಸಿದ ಸ್ಥಳಗಳಲ್ಲಿ ನಿಯಮಿತವಾಗಿ ವ್ಯಾಪಾರ ಚಟುವಟಿಕೆಗಳನ್ನು ನಡೆಸುವ ಬೀದಿಬದಿ ವ್ಯಾಪಾರಿಗಳು;

(ಎಲ್) "ಬೀದಿಬದಿ ವ್ಯಾಪಾರಿ" ಎಂದರೆ, ಸಾರ್ವಜನಿಕರಿಗೆ ರಸ್ತೆಬದಿಯಲ್ಲಿ, ಓಣಿಯಲ್ಲಿ, ಮಗ್ಗಲುದಾರಿಯಲ್ಲಿ, ಪಾದಚಾರಿ ಮಾರ್ಗದಲ್ಲಿ, ರಸ್ತೆ ಪಕ್ಕದ ಕಾಲುದಾರಿಯಲ್ಲಿ, ಸಾರ್ವಜನಿಕ ಉದ್ಯಾನದಲ್ಲಿ ಅಥವಾ ಇತರ ಸಾರ್ವಜನಿಕ ಸ್ಥಳದಲ್ಲಿ ಅಥವಾ ಖಾಸಗಿ ಸ್ಥಳದಲ್ಲಿ, ತಾತ್ಕಾಲಿಕವಾಗಿ ನಿರ್ಮಿಸಲಾದ ಮಳಿಗೆಯಲ್ಲಿ ಅಥವಾ ಗಾಡಿಗಳಲ್ಲಿ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಸಂಚರಿಸುತ್ತ ಪ್ರತಿನಿತ್ಯ ಬಳಕೆಯ ಪದಾರ್ಥಗಳ, ಸರಕುಗಳ, ಸಾಮಗ್ರಿಗಳ, ಆಹಾರ ಪದಾರ್ಥಗಳ ಅಥವಾ

ವಾಣಿಜ್ಯ ಸರಕುಗಳ ಮಾರಾಟದಲ್ಲಿ ತೊಡಗಿರುವ ಮತ್ತು ಸಾರ್ವಜನಿಕರಿಗೆ ಸೇವೆಗಳನ್ನು ಒದಗಿಸುವ ವ್ಯಕ್ತಿ ಮತ್ತು ಇದರಲ್ಲಿ ತಳ್ಳುಗಾಡಿ ವ್ಯಾಪಾರಿ, ಅಲೆಮಾರಿ ವ್ಯಾಪಾರಿ, ಆಕ್ರಮಿತ ವ್ಯಾಪಾರಿ ಮತ್ತು 'ಬೀದಿಬದಿ ವ್ಯಾಪಾರಿ' ಎಂಬ ಪದಾವಳಿಗೆ, ಸ್ಥಳೀಯವಾದ ಅಥವಾ ಪ್ರಾದೇಶಿಕವಾಗಿ ನಿರ್ದಿಷ್ಟವಾದ ಇತರ ಎಲ್ಲ ಪರ್ಯಾಯ ಪದಗಳನ್ನು ಒಳಗೊಳ್ಳುತ್ತದೆ ಮತ್ತು 'ಬೀದಿಬದಿ ವ್ಯಾಪಾರ' ಎಂಬ ಪದಗಳನ್ನು, ಅವುಗಳ ವ್ಯಾಕರಣ ವ್ಯತ್ಯಾಸಗಳು ಮತ್ತು ಸಜಾತೀಯ ಪದಾವಳಿಗಳೊಂದಿಗೆ ಆ ತದನುಸಾರವಾಗಿ ಅರ್ಥೈಸತಕ್ಕದ್ದು;

(ಎಂ) "ಪಟ್ಟಣ ವ್ಯಾಪಾರ ಸಮಿತಿ" ಎಂದರೆ, 22ನೇ ಪ್ರಕರಣದ ಮೇರೆಗೆ ಸಮುಚಿತ ಸರ್ಕಾರವು ರಚಿಸಿದ ನಿಕಾಯ;

(ಎನ್) "ವ್ಯಾಪಾರ ವಲಯ" ಎಂದರೆ, ಬೀದಿಬದಿ ವ್ಯಾಪಾರಿಗಳು ಬೀದಿಬದಿ ವ್ಯಾಪಾರ ಮಾಡುವುದಕ್ಕಾಗಿ ನಿರ್ದಿಷ್ಟ ಬಳಕೆಗಾಗಿ ಪಟ್ಟಣ ವ್ಯಾಪಾರ ಸಮಿತಿಯ ಶಿಫಾರಸ್ಸುಗಳ ಮೇರೆಗೆ, ಸ್ಥಳೀಯ ಪ್ರಾಧಿಕಾರವು, ಹಾಗೆಂದು ಗೊತ್ತುಪಡಿಸಿದಂಥ ಪ್ರದೇಶ, ಸ್ಥಳ ಅಥವಾ ನಿಶ್ಚಿತ ಸ್ಥಳ ಮತ್ತು ಇದರಲ್ಲಿ, ಪಾದಚಾರಿ ಮಾರ್ಗ, ಕಾಲುದಾರಿ, ಮಗ್ಗುಲುದಾರಿ, ಏರಿ, ರಸ್ತೆಯ ಭಾಗಗಳು, ಸಾರ್ವಜನಿಕರಿಗಾಗಿ ಇರುವ ನಿರೀಕ್ಷಣಾ ಪ್ರದೇಶ ಅಥವಾ ಸಾರ್ವಜನಿಕರಿಗಾಗಿ ವ್ಯಾಪಾರ ಮಾಡುವ, ಚಟುವಟಿಕೆಗಳಿಗಾಗಿ ಮತ್ತು ಸೇವೆಗಳನ್ನು ಒದಗಿಸುವುದಕ್ಕಾಗಿ ಸೂಕ್ತವೆಂದು ಪರಿಗಣಿಸಬಹುದಾದಂಥ ಯಾವುದೇ ಸ್ಥಳ.

(2) ಈ ಅಧಿನಿಯಮದಲ್ಲಿ ಯಾವುದೇ ಅಧಿನಿಯಮಿತಿಗೆ ಅಥವಾ ಯಾವುದೇ ಉಪಬಂಧಕ್ಕೆ ಮಾಡಿದ ಯಾವುದೇ ಉಲ್ಲೇಖವನ್ನು, ಅಂಥ ಅಧಿನಿಯಮಿತಿ ಅಥವಾ ಅಂಥ ಉಪಬಂಧವು ಜಾರಿಯಲ್ಲಿಲ್ಲದಿರುವ ಪ್ರದೇಶಕ್ಕೆ ಸಂಬಂಧಿಸಿದಂತೆ, ಆ ಪ್ರದೇಶದಲ್ಲಿ ಜಾರಿಯಲ್ಲಿರುವ ಸಂವಾದಿ ಕಾನೂನು, ಯಾವುದಾದರೂ ಇದ್ದರೆ, ಅದಕ್ಕೆ ಮಾಡಿದ ಉಲ್ಲೇಖವೆಂಬುದಾಗಿ ಅರ್ಥೈಸತಕ್ಕದ್ದು.

## ಅಧ್ಯಾಯ II

## ಬೀದಿಬದಿ ವ್ಯಾಪಾರ ವಿನಿಯಮನ

**3. ಬೀದಿಬದಿ ವ್ಯಾಪಾರಿಗಳ ಸಮೀಕ್ಷೆ ಮತ್ತು ತೆರವುಗೊಳಿಸುವುದರಿಂದ ಅಥವಾ ಸ್ಥಳಾಂತರಿಸುವುದರಿಂದ ಸಂರಕ್ಷಿಸುವುದು.–** (1) ಪಟ್ಟಣ ವ್ಯಾಪಾರ ಸಮಿತಿಯು, ಸ್ಕೀಮ್‌ನಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಅವಧಿಯೊಳಗೆ ಮತ್ತು ಅಂಥ ರೀತಿಯಲ್ಲಿ, ತನ್ನ ಅಧಿಕಾರವ್ಯಾಪ್ತಿಯಲ್ಲಿ ಬರುವ ಪ್ರದೇಶದೊಳಗೆ ಇರುವ ಎಲ್ಲ ಬೀದಿಬದಿ ವ್ಯಾಪಾರಿಗಳ ಸಮೀಕ್ಷೆಯನ್ನು ನಡೆಸತಕ್ಕದ್ದು ಮತ್ತು ತರುವಾಯದ ಸಮೀಕ್ಷೆಯನ್ನು ಕನಿಷ್ಠಪಕ್ಷ ಐದು ವರ್ಷಗಳಿಗೊಮ್ಮೆ ನಡೆಸತಕ್ಕದ್ದು.

(2) ಪಟ್ಟಣ ವ್ಯಾಪಾರ ಸಮಿತಿಯು, ಬೀದಿಬದಿ ವ್ಯಾಪಾರ ಯೋಜನೆಗೆ ಮತ್ತು ವ್ಯಾಪಾರ ವಲಯಗಳ ಧಾರಣ ಸಾಮರ್ಥ್ಯಕ್ಕೆ ಅನುಸಾರವಾಗಿ, ಸಂದರ್ಭಾನುಸಾರ ವಾರ್ಡ್ ಅಥವಾ ವಲಯ ಅಥವಾ ಪಟ್ಟಣ ಅಥವಾ ನಗರ ಜನಸಂಖ್ಯೆಯ ಶೇಕಡ ಎರಡೂವರೆಯಷ್ಟು ಪ್ರಮಾಣಕ್ಕೆ ಒಳಪಟ್ಟು ಸಮೀಕ್ಷೆಯಲ್ಲಿ ಗುರುತಿಸಿದಂತೆ, ಅಸ್ತಿತ್ವದಲ್ಲಿರುವ ಎಲ್ಲ ಬೀದಿಬದಿ ವ್ಯಾಪಾರಿಗಳಿಗೆ ಅವರು ಮಾರಾಟ ವೃತ್ತಿಯಲ್ಲಿ ತೊಡಗಿರುವ ವ್ಯಾಪಾರ ವಲಯಗಳಲ್ಲಿ ಸ್ಥಳಾವಕಾಶ ಕಲ್ಪಿಸಲಾಗಿದೆ ಎಂಬುದನ್ನು ಖಚಿತಪಡಿಸತಕ್ಕದ್ದು.

(3) ಉಪಪ್ರಕರಣ (1)ರ ಮೇರೆಗೆ ನಿರ್ದಿಷ್ಟ ಸಮೀಕ್ಷೆಯು, ಪೂರ್ಣಗೊಳ್ಳುವವರೆಗೆ ಅಥವಾ ಸಂದರ್ಭಾನುಸಾರ ಎಲ್ಲ ಬೀದಿಬದಿ ವ್ಯಾಪಾರಿಗಳಿಗೆ ವ್ಯಾಪಾರ ಪ್ರಮಾಣಪತ್ರವನ್ನು ನೀಡುವವರೆಗೆ ಯಾರೇ ಬೀದಿಬದಿ ವ್ಯಾಪಾರಿಗಳನ್ನು ತೆರವುಗೊಳಿಸತಕ್ಕದ್ದಲ್ಲ ಅಥವಾ ಸ್ಥಳಾಂತರಿಸತಕ್ಕದ್ದಲ್ಲ.

**4. ವ್ಯಾಪಾರ ಪ್ರಮಾಣಪತ್ರ ನೀಡುವುದು.–** (1) 3ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ನಡೆಸಿದ ಸಮೀಕ್ಷೆಯಲ್ಲಿ ಗುರುತಿಸಿದ ಹದಿನಾಲ್ಕು ವರ್ಷಗಳ ವಯಸ್ಸನ್ನು ಅಥವಾ ಸಮುಚಿತ ಸರ್ಕಾರವು, ನಿಯಮಿಸಬಹುದಾದಂಥ ವಯಸ್ಸನ್ನು ಪೂರ್ಣಗೊಳಿಸಿರುವ ಪ್ರತಿಯೊಬ್ಬ ಬೀದಿಬದಿ ವ್ಯಾಪಾರಿಗೆ, ಬೀದಿಬದಿ ವ್ಯಾಪಾರಕ್ಕಾಗಿ ಮಾಡಿರುವ ಯೋಜನೆಯಲ್ಲಿ ನಿರ್ದಿಷ್ಟಪಡಿಸಿದ

ನಿರ್ಬಂಧಗಳೂ ಒಳಗೊಂಡಂತೆ, ಸ್ಕೀಮ್‌ನಲ್ಲಿ ನಿರ್ದಿಷ್ಟಪಡಿಸಿದಂಥ ನಿಬಂಧನೆ ಮತ್ತು ಷರತ್ತುಗಳು ಮತ್ತು ಅವಧಿಗೆ ಒಳಪಟ್ಟು ಪಟ್ಟಣ ವ್ಯಾಪಾರ ಸಮಿತಿಯು, ವ್ಯಾಪಾರ ಪ್ರಮಾಣಪತ್ರವನ್ನು ನೀಡತಕ್ಕದ್ದು:

ಪರಂತು, ಈ ಅಧಿನಿಯಮದ ಪ್ರಾರಂಭಕ್ಕೆ ಮುಂಚೆ, ಯಾರಿಗೆ 3ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ನಡೆಸಿದ ಸಮೀಕ್ಷೆಯಲ್ಲಿ ಒಳಗೊಂಡಿರಲಿ ಅಥವಾ ಸಮೀಕ್ಷೆಯಲ್ಲಿ ಒಳಗೊಂಡಿರದಿರಲಿ ಲೈಸೆನ್ಸ್ ಎಂದು ಕರೆಯಲಾಗಿರಲಿ ಅಥವಾ ಅನುಮತಿಯು ಇತರ ಯಾವುದೇ ರೂಪದಲ್ಲಾಗಿರಲಿ (ಸ್ಥಾಯೀ ವ್ಯಾಪಾರಿಯಾಗಿರಲಿ ಅಥವಾ ಸಂಚಾರಿ ವ್ಯಾಪಾರಿಯಾಗಿರಲಿ ಅಥವಾ ಇತರ ಯಾವುದೇ ಪ್ರವರ್ಗದ ವ್ಯಾಪಾರಿಯಾಗಿರಲಿ) ವ್ಯಾಪಾರ ಪ್ರಮಾಣಪತ್ರವನ್ನು ನೀಡಲಾಗಿದೆಯೋ ಆ ವ್ಯಕ್ತಿಗೆ ಯಾವ ಅವಧಿಯವರೆಗೆ ಅಂಥ ವ್ಯಾಪಾರ ಪ್ರಮಾಣಪತ್ರವನ್ನು ನೀಡಲಾಗಿದೆಯೋ ಆ ಅವಧಿಯವರೆಗೆ ಅವನು ಆ ಪ್ರವರ್ಗದ ಬೀದಿಬದಿ ವ್ಯಾಪಾರಿ ಎಂಬುದಾಗಿ ಭಾವಿಸತಕ್ಕದ್ದು.

(2) ಎರಡು ಸಮೀಕ್ಷೆಗಳ ನಡುವಿನ ಮಧ್ಯಂತರ ಅವಧಿಯಲ್ಲಿ ಯಾರೇ ವ್ಯಕ್ತಿಯು, ವ್ಯಾಪಾರ ಮಾಡಲು ಕೋರಿದಲ್ಲಿ, ಪಟ್ಟಣ ವ್ಯಾಪಾರ ಸಮಿತಿಯು ಬೀದಿಬದಿ ವ್ಯಾಪಾರಕ್ಕಾಗಿ ಮತ್ತು ವ್ಯಾಪಾರ ವಲಯಗಳ ಧಾರಣ ಸಾಮರ್ಥ್ಯಕ್ಕೆ ಇರುವ ಸ್ಕೀಮ್, ಯೋಜನೆಗೆ ಒಳಪಟ್ಟು, ಅಂಥ ವ್ಯಕ್ತಿಗೆ ವ್ಯಾಪಾರ ಪ್ರಮಾಣಪತ್ರವನ್ನು ನೀಡಬಹುದು.

(3) ಉಪಪ್ರಕರಣ (1)ರ ಮೇರೆಗೆ ಗುರುತಿಸಲಾದ ಬೀದಿಬದಿ ವ್ಯಾಪಾರಿಗಳ ಸಂಖ್ಯೆಯು ಅಥವಾ (2)ನೇ ಉಪಪ್ರಕರಣದ ಮೇರೆಗೆ ವ್ಯಾಪಾರ ಮಾಡಲು ಕೋರಿರುವ ವ್ಯಕ್ತಿಗಳ ಸಂಖ್ಯೆಯು, ವ್ಯಾಪಾರ ವಲಯದ ಧಾರಣ ಸಾಮರ್ಥ್ಯಕ್ಕಿಂತ ಹೆಚ್ಚಾಗಿದ್ದಲ್ಲಿ ಮತ್ತು ಆ ವ್ಯಾಪಾರ ವಲಯದಲ್ಲಿ ಸ್ಥಳಾವಕಾಶ ಕಲ್ಪಿಸಬೇಕಾದ ವ್ಯಕ್ತಿಗಳ ಸಂಖ್ಯೆಯನ್ನು ಮೀರಿದಲ್ಲಿ, ಪಟ್ಟಣ ವ್ಯಾಪಾರ ಸಮಿತಿಯು, ಆ ವ್ಯಾಪಾರ ವಲಯಕ್ಕಾಗಿ ವ್ಯಾಪಾರ ಪ್ರಮಾಣಪತ್ರವನ್ನು ನೀಡುವುದಕ್ಕಾಗಿ ಚೀಟಿ ಎತ್ತತಕ್ಕದ್ದು ಮತ್ತು ಉಳಿದ ವ್ಯಕ್ತಿಗಳಿಗೆ, ಸ್ಥಳಾಂತರವನ್ನು ತಪ್ಪಿಸುವುದಕ್ಕೆ ಪಕ್ಕದ ಯಾವುದೇ ವ್ಯಾಪಾರ ವಲಯದಲ್ಲಿ ಸ್ಥಳಾವಕಾಶ ಮಾಡಿಕೊಡತಕ್ಕದ್ದು.

**5. ವ್ಯಾಪಾರ ಪ್ರಮಾಣಪತ್ರ ನೀಡುವುದಕ್ಕಾಗಿ ಷರತ್ತುಗಳು.–** (1) ಪ್ರತಿಯೊಬ್ಬ ಬೀದಿಬದಿ ವ್ಯಾಪಾರಿಯು, 4ನೇ ಪ್ರಕರಣದ ಮೇರೆಗೆ ವ್ಯಾಪಾರ ಪ್ರಮಾಣಪತ್ರದ ನೀಡಿಕೆಗೆ ಮುಂಚೆ ಪಟ್ಟಣ ವ್ಯಾಪಾರ ಸಮಿತಿಗೆ ಮುಚ್ಚಳಿಕೆ ಪತ್ರವನ್ನು ನೀಡತಕ್ಕದ್ದು, ಆ ಮುಚ್ಚಳಿಕೆ ಪತ್ರದಲ್ಲಿ,–

(ಎ) ಬೀದಿಬದಿ ವ್ಯಾಪಾರದ ವ್ಯವಹಾರವನ್ನು ತಾನೇ ಸ್ವತಃ ಅಥವಾ ತನ್ನ ಕುಟುಂಬದ ಯಾರೇ ಸದಸ್ಯನ ಮುಖಾಂತರ ಮಾತ್ರ ನಡೆಸುತ್ತೇನೆಂದು;

(ಬಿ) ಅವನು ಜೀವನೋಪಾಯದ ಇತರ ಯಾವುದೇ ಆದಾಯ ಹೊಂದಿಲ್ಲವೆಂದು;

(ಸಿ) ಅವನು, ಇತರ ಯಾರೇ ವ್ಯಕ್ತಿಗೆ ಬಾಡಿಗೆಯು ಒಳಗೊಂಡಂತೆ ವ್ಯಾಪಾರ ಪ್ರಮಾಣಪತ್ರವನ್ನು ಅಥವಾ ಅದರಲ್ಲಿ ನಿರ್ದಿಷ್ಟಪಡಿಸಿದ ಸ್ಥಳವನ್ನು ಇತರೆ ಯಾವುದೇ ರೀತಿಯಲ್ಲೂ ವರ್ಗಾಯಿಸುವುದಿಲ್ಲವೆಂದು

– ಪಟ್ಟಣ ವ್ಯಾಪಾರ ಸಮಿತಿಗೆ ಬರೆದುಕೊಡತಕ್ಕದ್ದು.

(2) ಯಾವ ಬೀದಿಬದಿ ವ್ಯಾಪಾರಿಗೆ ವ್ಯಾಪಾರ ಪ್ರಮಾಣಪತ್ರವನ್ನು ನೀಡಲಾಗಿದೆಯೋ ಆ ಬೀದಿಬದಿ ವ್ಯಾಪಾರಿಯು, ಮರಣ ಹೊಂದಿದಲ್ಲಿ ಅಥವಾ ಯಾವುದೇ ಶಾಶ್ವತ ಅಂಗವಿಕಲತೆಯಿಂದ ಬಳಲುತ್ತಿರುವಲ್ಲಿ ಅಥವಾ ಅನಾರೋಗ್ಯವಾಗಿರುವಲ್ಲಿ ಆತನ ಬದಲಾಗಿ ಕೆಳಕಂಡ ಆದ್ಯತಾ ಕ್ರಮದಲ್ಲಿ ಆತನ ಕುಟುಂಬದ ಸದಸ್ಯರಲ್ಲಿ ಒಬ್ಬರು ವ್ಯಾಪಾರ ಪ್ರಮಾಣಪತ್ರದ ಸಿಂಧುತ್ವವಿರುವರೆಗೆ ವ್ಯಾಪಾರ ಮಾಡಬಹುದು,–

(ಎ) ಬೀದಿಬದಿ ವ್ಯಾಪಾರಿಯ ಗಂಡ/ಹೆಂಡತಿ;

(ಬಿ) ಬೀದಿಬದಿ ವ್ಯಾಪಾರಿಯ ಅವಲಂಬಿತ ಮಗು:

ಪರಂತು, ವ್ಯಾಪಾರಿಯ ಬದಲಾಗಿ ವ್ಯಾಪಾರ ಮಾಡಲು ಯಾರು ಹಕ್ಕುಳ್ಳವರಾಗಿದ್ದಾರೆ ಎಂಬ ವಿಚಾರದಲ್ಲಿ ವಿವಾದ ಉದ್ಭವಿಸಿದಲ್ಲಿ, 20ನೇ ಪ್ರಕರಣದ ಮೇರೆಗೆ, ಸಮಿತಿಯು ಆ ವಿಷಯವನ್ನು ನಿರ್ಧರಿಸತಕ್ಕದ್ದು.

**6. ವ್ಯಾಪಾರ ಪ್ರಮಾಣಪತ್ರದ ಪ್ರವರ್ಗಗಳು ಮತ್ತು ಗುರುತಿನ ಚೀಟಿಗಳನ್ನು ನೀಡುವುದು.–** (1) ವ್ಯಾಪಾರ ಪ್ರಮಾಣಪತ್ರವನ್ನು ಈ ಕೆಳಕಂಡ ಯಾವುದೇ ಪ್ರವರ್ಗಗಳ ಅಡಿಯಲ್ಲಿ ನೀಡತಕ್ಕದ್ದು, ಎಂದರೆ:–

(ಎ) ಸ್ಥಾಯೀ ವ್ಯಾಪಾರಿ;

(ಬಿ) ಸಂಚಾರಿ ವ್ಯಾಪಾರಿ; ಅಥವಾ

(ಸಿ) ಸ್ಕೀಮ್‌ನಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಇತರ ಯಾವುದೇ ಪ್ರವರ್ಗ.

(2) ಉಪಪ್ರಕರಣ (1)ರಲ್ಲಿ ನಿರ್ದಿಷ್ಟಪಡಿಸಿದ ಪ್ರವರ್ಗಗಳಿಗಾಗಿ ನೀಡಿದ ವ್ಯಾಪಾರ ಪ್ರಮಾಣಪತ್ರವು, ಸ್ಕೀಮ್‌ನಲ್ಲಿ ನಿರ್ದಿಷ್ಟಪಡಿಸಬಹುದಾದಂಥ ನಮೂನೆಯಲ್ಲಿರತಕ್ಕದ್ದು ಮತ್ತು ನಿರ್ದಿಷ್ಟಪಡಿಸಬಹುದಾದಂಥ ರೀತಿಯಲ್ಲಿ ನೀಡತಕ್ಕದ್ದು ಮತ್ತು ಬೀದಿಬದಿ ವ್ಯಾಪಾರಿಯು, ತನ್ನ ವ್ಯಾಪಾರ ಚಟುವಟಿಕೆಗಳನ್ನು ಯಾವ ವ್ಯಾಪಾರ ವಲಯದಲ್ಲಿ ನಡೆಸತಕ್ಕದ್ದೋ, ಆ ವ್ಯಾಪಾರ ವಲಯವನ್ನು, ಅಂಥ ವ್ಯಾಪಾರ ಚಟುವಟಿಕೆಗಳನ್ನು ನಡೆಸುವುದಕ್ಕಾಗಿ ದಿನಗಳನ್ನು ಮತ್ತು ಸಮಯಗಳನ್ನು ಮತ್ತು ಅವನು ಅಂಥ ವ್ಯಾಪಾರ ಚಟುವಟಿಕೆಗಳನ್ನು ಯಾವ ಷರತ್ತುಗಳು ಮತ್ತು ನಿರ್ಬಂಧಗಳಿಗೆ ಒಳಪಟ್ಟು ನಡೆಸತಕ್ಕವನಾಗಿರುವನೋ ಅಂಥ ಷರತ್ತುಗಳು ಮತ್ತು ನಿರ್ಬಂಧಗಳನ್ನು ನಿರ್ದಿಷ್ಟಪಡಿಸತಕ್ಕದ್ದು.

(3) ಉಪಪ್ರಕರಣ (1)ರ ಮೇರೆಗೆ ಯಾರಿಗೆ ವ್ಯಾಪಾರ ಪ್ರಮಾಣಪತ್ರವನ್ನು ನೀಡಲಾಗಿದೆಯೋ ಆ ಪ್ರತಿಯೊಬ್ಬ ಬೀದಿಬದಿ ವ್ಯಾಪಾರಿಗೆ, ಸ್ಕೀಮ್‌ನಲ್ಲಿ ನಿರ್ದಿಷ್ಟಪಡಿಸಬಹುದಾದಂಥ ನಮೂನೆಯಲ್ಲಿ ಮತ್ತು ರೀತಿಯಲ್ಲಿ ಗುರುತಿನ ಚೀಟಿಗಳನ್ನು ನೀಡತಕ್ಕದ್ದು.

**7. ವ್ಯಾಪಾರ ಪ್ರಮಾಣಪತ್ರವನ್ನು ನೀಡುವುದಕ್ಕಾಗಿ ಇರುವ ಮಾನದಂಡಗಳು.–** ಬೀದಿಬದಿ ವ್ಯಾಪಾರಿಗೆ ವ್ಯಾಪಾರ ಪ್ರಮಾಣಪತ್ರವನ್ನು ನೀಡುವುದಕ್ಕಾಗಿ, ಪಟ್ಟಣ ವ್ಯಾಪಾರ ಸಮಿತಿಯು ಅನುಸರಿಸಬೇಕಾದ ಮಾನದಂಡವು, ಸ್ಕೀಮ್‌ನಲ್ಲಿ ನಿರ್ದಿಷ್ಟಪಡಿಸಿದಂಥದ್ದಾಗಿರತಕ್ಕದ್ದು, ಇತರ ವಿಷಯಗಳಲ್ಲದೆ, ಅನುಸೂಚಿತ ಜಾತಿಗಳಿಗೆ, ಅನುಸೂಚಿತ ಪಂಗಡಗಳಿಗೆ, ಇತರ ಹಿಂದುಳಿದ ವರ್ಗಗಳಿಗೆ, ಮಹಿಳೆಯರಿಗೆ, ಅಂಗವಿಕಲ ವ್ಯಕ್ತಿಗಳಿಗೆ, ಅಲ್ಪಸಂಖ್ಯಾತರಿಗೆ ಅಥವಾ ಸ್ಕೀಮ್‌ನಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಇತರ ಪ್ರವರ್ಗಗಳಿಗೆ ನೀಡಬಹುದು.

**8. ಮಾರಾಟದ ಶುಲ್ಕಗಳು.–** ವ್ಯಾಪಾರ ಪ್ರಮಾಣಪತ್ರವನ್ನು ನೀಡಲಾಗಿರುವ ಪ್ರತಿಯೊಬ್ಬ ಬೀದಿಬದಿ ವ್ಯಾಪಾರಿಯು, ಸ್ಕೀಮ್‌ನಲ್ಲಿ ನಿರ್ದಿಷ್ಟಪಡಿಸಬಹುದಾದಂಥ ವ್ಯಾಪಾರ ಶುಲ್ಕಗಳನ್ನು ಸಂದಾಯ ಮಾಡತಕ್ಕದ್ದು.

**9. ವ್ಯಾಪಾರ ಪ್ರಮಾಣಪತ್ರದ ಸಿಂಧುತ್ವ ಮತ್ತು ನವೀಕರಣ.–** (1) ಪ್ರತಿಯೊಂದು ವ್ಯಾಪಾರ ಪ್ರಮಾಣಪತ್ರವು ಸ್ಕೀಮ್‌ನಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಅವಧಿಯವರೆಗೆ ಸಿಂಧುವಾಗಿರತಕ್ಕದ್ದು.

(2) ಪ್ರತಿಯೊಂದು ವ್ಯಾಪಾರ ಪ್ರಮಾಣಪತ್ರವನ್ನು ಸ್ಕೀಮ್‌ನಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಅವಧಿಯವರೆಗೆ, ಅಂಥ ರೀತಿಯಲ್ಲಿ ಮತ್ತು ಅಂಥ ಶುಲ್ಕಗಳನ್ನು ಸಂದಾಯ ಮಾಡಿದ ಮೇಲೆ ನವೀಕರಿಸುವಂಥದ್ದಾಗಿರತಕ್ಕದ್ದು.

**10. ವ್ಯಾಪಾರ ಪ್ರಮಾಣಪತ್ರವನ್ನು ರದ್ದುಪಡಿಸುವುದು ಅಥವಾ ಅಮಾನತುಗೊಳಿಸುವುದು.–** ಈ ಅಧಿನಿಯಮದ ಮೇರೆಗೆ ವ್ಯಾಪಾರ ಪ್ರಮಾಣಪತ್ರವನ್ನು ನೀಡಲಾಗಿರುವ ಬೀದಿಬದಿ ವ್ಯಾಪಾರಿಯು, ಅದರ ನಿಬಂಧಗಳು ಮತ್ತು ಯಾವುವೇ ಷರತ್ತುಗಳನ್ನು ಅಥವಾ ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮಗಳನ್ನು ಅಥವಾ ಸ್ಕೀಮ್‌ಗಳ ಮೇರೆಗೆ ಬೀದಿಬದಿ ವ್ಯಾಪಾರವನ್ನು ವಿನಿಯಮಿಸುವ ಉದ್ದೇಶಕ್ಕಾಗಿ ನಿರ್ದಿಷ್ಟಪಡಿಸಿದ ಇತರ ಯಾವುದೇ ನಿಬಂಧನೆಗಳನ್ನು ಮತ್ತು ಷರತ್ತುಗಳನ್ನು ಉಲ್ಲಂಘನೆ ಮಾಡಿದಲ್ಲಿ ಅಥವಾ ಪಟ್ಟಣ ವ್ಯಾಪಾರ ಸಮಿತಿಯು ಅಂಥ ವ್ಯಾಪಾರ ಪ್ರಮಾಣಪತ್ರವು ತಪ್ಪು ನಿರೂಪಣೆಯಿಂದ ಅಥವಾ ಮೋಸದಿಂದ ಕೂಡಿದೆ ಎಂದು ಮನವರಿಕೆ ಮಾಡಿಕೊಂಡಲ್ಲಿ, ಪಟ್ಟಣ ವ್ಯಾಪಾರ ಸಮಿತಿಯು, ಈ ಅಧಿನಿಯಮದ ಮೇರೆಗೆ ಬೀದಿಬದಿ

ವ್ಯಾಪಾರಿಯು ಭರಿಸಬೇಕಾಗಿರುವ ಇತರೆ ಯಾವುದೇ ಜುಲ್ಮಾನೆಗೆ ಬಾಧಕವಾಗದಂತೆ, ಸ್ಕೀಮ್‌ನಲ್ಲಿ ನಿರ್ದಿಷ್ಟಪಡಿಸಬಹುದಾದಂಥ ರೀತಿಯಲ್ಲಿ ಮತ್ತು ಸೂಕ್ತವೆಂದು ತಾನು ಭಾವಿಸುವಂಥ ಅವಧಿಯವರೆಗೆ ಮಾರಾಟ ಪ್ರಮಾಣಪತ್ರವನ್ನು ರದ್ದುಗೊಳಿಸಬಹುದು ಅಥವಾ ಅದನ್ನು ಅಮಾನತುಗೊಳಿಸಬಹುದು:

ಪರಂತು, ಪಟ್ಟಣ ವ್ಯಾಪಾರ ಸಮಿತಿಯು, ಬೀದಿಬದಿ ವ್ಯಾಪಾರಿಗೆ ತನ್ನ ಅಹವಾಲನ್ನು ಹೇಳಿಕೊಳ್ಳಲು ಅವಕಾಶ ನೀಡಿದ ಹೊರತು ಅಂಥ ಯಾವುದೇ ಪ್ರಮಾಣಪತ್ರವನ್ನು ರದ್ದು ಮಾಡತಕ್ಕದ್ದಲ್ಲ ಅಥವಾ ಅಮಾನತುಗೊಳಿಸತಕ್ಕದ್ದಲ್ಲ.

**11. ಪಟ್ಟಣ ವ್ಯಾಪಾರ ಸಮಿತಿಯ ನಿರ್ಧಾರದ ಮೇಲೆ ಅಪೀಲು.–** (1) 6ನೇ ಪ್ರಕರಣದ ಮೇರೆಗೆ ವ್ಯಾಪಾರ ಪ್ರಮಾಣಪತ್ರ ನೀಡುವುದಕ್ಕೆ ಅಥವಾ 10ನೇ ಪ್ರಕರಣದ ಮೇರೆಗೆ ವ್ಯಾಪಾರ ಪ್ರಮಾಣಪತ್ರವನ್ನು ರದ್ದುಪಡಿಸುವುದಕ್ಕೆ ಅಥವಾ ಅಮಾನತುಗೊಳಿಸುವುದಕ್ಕೆ ಸಂಬಂಧಿಸಿದಂತೆ, ಪಟ್ಟಣ ವ್ಯಾಪಾರ ಸಮಿತಿಯು ಕೈಗೊಂಡ ಯಾವುದೇ ನಿರ್ಧಾರದಿಂದ ಬಾಧಿತನಾದ ಯಾರೇ ವ್ಯಕ್ತಿಯು, ನಿಯಮಿಸಬಹುದಾದಂಥ ನಮೂನೆಯಲ್ಲಿ, ಅಂಥ ಅವಧಿಯೊಳಗೆ ಮತ್ತು ಅಂಥ ರೀತಿಯಲ್ಲಿ ಸ್ಥಳೀಯ ಪ್ರಾಧಿಕಾರಕ್ಕೆ ಅಪೀಲನ್ನು ಸಲ್ಲಿಸಬಹುದು.

(2) ಸ್ಥಳೀಯ ಪ್ರಾಧಿಕಾರವು, ಅಪೀಲುದಾರನಿಗೆ ಅಹವಾಲನ್ನು ಹೇಳಿಕೊಳ್ಳಲು ಅವಕಾಶ ನೀಡಿದ ಹೊರತು, ಯಾವುದೇ ಅಪೀಲನ್ನು ವಿಲೆ ಮಾಡತಕ್ಕದ್ದಲ್ಲ.

## ಅಧ್ಯಾಯ III

## ಬೀದಿಬದಿ ವ್ಯಾಪಾರಿಗಳ ಹಕ್ಕುಗಳು ಮತ್ತು ಬಾಧ್ಯತೆಗಳು

**12. ಬೀದಿಬದಿ ವ್ಯಾಪಾರಿಯ ಹಕ್ಕುಗಳು.–** (1) ಪ್ರತಿಯೊಬ್ಬ ಬೀದಿಬದಿ ವ್ಯಾಪಾರಿಯು, ವ್ಯಾಪಾರ ಪ್ರಮಾಣಪತ್ರದಲ್ಲಿ ನಮೂದಿಸಲಾದ ನಿಬಂಧನೆಗಳು ಮತ್ತು ಷರತ್ತುಗಳಿಗೆ ಅನುಸಾರವಾಗಿ ಬೀದಿಬದಿ ವ್ಯಾಪಾರ ಚಟುವಟಿಕೆಗಳ ವ್ಯವಹಾರವನ್ನು ನಡೆಸುವುದಕ್ಕೆ ಹಕ್ಕನ್ನು ಹೊಂದಿರತಕ್ಕದ್ದು.

(2) ಉಪಪ್ರಕರಣ (1)ರಲ್ಲಿ ಏನೇ ಒಳಗೊಂಡಿದ್ದರೂ, ಸಂದರ್ಭಾನುಸಾರ ಯಾವುದೇ ಪ್ರದೇಶವನ್ನು ಅಥವಾ ಜಾಗವನ್ನು, ವ್ಯಾಪಾರೇತರ ವಲಯವೆಂದು ಗುರುತಿಸಲಾಗಿದ್ದಲ್ಲಿ, ಯಾರೇ ಬೀದಿಬದಿ ವ್ಯಾಪಾರಿಯು ಆ ವಲಯದಲ್ಲಿ ಯಾವುದೇ ವ್ಯಾಪಾರ ಚಟುವಟಿಕೆಗಳನ್ನು ನಡೆಸತಕ್ಕದ್ದಲ್ಲ.

**13. ಸ್ಥಳಾಂತರಗೊಂಡಾಗ ಹೊಸ ಜಾಗಕ್ಕಾಗಿ ಅಥವಾ ಪ್ರದೇಶಕ್ಕಾಗಿ ಬೀದಿಬದಿ ವ್ಯಾಪಾರಿಯ ಹಕ್ಕು.–** ವ್ಯಾಪಾರ ಪ್ರಮಾಣಪತ್ರ ಪಡೆದುಕೊಂಡಿರುವ ಪ್ರತಿಯೊಬ್ಬ ಬೀದಿಬದಿ ವ್ಯಾಪಾರಿಯು, 18ನೇ ಪ್ರಕರಣದ ಮೇರೆಗೆ ಆತನನ್ನು ಸ್ಥಳಾಂತರಗೊಳಿಸಿದ ಸಂದರ್ಭದಲ್ಲಿ, ಪಟ್ಟಣ ವ್ಯಾಪಾರ ಸಮಿತಿಯೊಂದಿಗೆ ಸಮಾಲೋಚಿಸಿ, ಸ್ಥಳೀಯ ಪ್ರಾಧಿಕಾರವು, ನಿರ್ಧರಿಸಬಹುದಾದಂತೆ, ಅವನು ತನ್ನ ವ್ಯಾಪಾರ ಚಟುವಟಿಕೆಗಳನ್ನು ನಡೆಸುವುದಕ್ಕಾಗಿ ಸಂದರ್ಭಾನುಸಾರ ಹೊಸ ಜಾಗಕ್ಕೆ ಅಥವಾ ಪ್ರದೇಶಕ್ಕೆ ಹಕ್ಕುಳ್ಳವನಾಗಿರತಕ್ಕದ್ದು.

**14. ಬೀದಿಬದಿ ವ್ಯಾಪಾರಿಗಳ ಕರ್ತವ್ಯ.–** ಬೀದಿಬದಿ ವ್ಯಾಪಾರಿಯು ಸಮಯ ಹಂಚಿಕೆಯ ಆಧಾರದ ಮೇಲೆ ಜಾಗವನ್ನು ಅಧಿಭೋಗಕ್ಕೆ ತೆಗೆದುಕೊಂಡಿರುವಾಗ, ಆತನಿಗೆ ಅನುಮತಿಸಿದ ಸಮಯ ಹಂಚಿಕೆಯ ಅವಧಿಯು ಮುಕ್ತಾಯವಾದಾಗ ಆತನ ಪ್ರತಿದಿನ ತನ್ನ ಸರಕುಗಳು ಮತ್ತು ಪದಾರ್ಥಗಳನ್ನು ತೆಗೆದುಕೊಂಡು ಹೋಗತಕ್ಕದ್ದು.

**15. ಸ್ವಚ್ಛತೆ ಮತ್ತು ಸಾರ್ವಜನಿಕ ನೈರ್ಮಲ್ಯ ಕಾಪಾಡುವುದು.–** ಪ್ರತಿಯೊಬ್ಬ ಬೀದಿಬದಿ ವ್ಯಾಪಾರಿಯು, ವ್ಯಾಪಾರ ವಲಯಗಳಲ್ಲಿ ಮತ್ತು ಅದಕ್ಕೆ ಲಗತ್ತಾದ ಪ್ರದೇಶಗಳಲ್ಲಿ ಸ್ವಚ್ಛತೆ ಮತ್ತು ಸಾರ್ವಜನಿಕ ನೈರ್ಮಲ್ಯವನ್ನು ಕಾಪಾಡಿಕೊಂಡು ಬರತಕ್ಕದ್ದು.

**16. ವ್ಯಾಪಾರ ವಲಯದಲ್ಲಿ ನಾಗರಿಕ ಸೌಕರ್ಯಗಳನ್ನು ಸುಸ್ಥಿತಿಯಲ್ಲಿ ನಿರ್ವಹಿಸುವುದು.–** ಪ್ರತಿಯೊಬ್ಬ ಬೀದಿಬದಿ ವ್ಯಾಪಾರಿಯು, ವ್ಯಾಪಾರ ವಲಯದಲ್ಲಿ ನಾಗರಿಕ ಸೌಕರ್ಯಗಳನ್ನು ಮತ್ತು ಸಾರ್ವಜನಿಕ ಸ್ವತ್ತುಗಳನ್ನು ಸುಸ್ಥಿತಿಯಲ್ಲಿ ನಿರ್ವಹಿಸತಕ್ಕದ್ದು

ಮತ್ತು ಅವುಗಳಿಗೆ ಹಾನಿಯುಂಟು ಮಾಡಬಾರದು ಅಥವಾ ಅವುಗಳನ್ನು ನಾಶಗೊಳಿಸಬಾರದು ಅಥವಾ ಯಾವುದೇ ಹಾನಿ ಅಥವಾ ನಾಶ ಉಂಟಾಗುವಂತೆ ಮಾಡಬಾರದು.

**17. ನಿರ್ವಹಣಾ ವೆಚ್ಚಗಳ ಸಂದಾಯ.–** ಪ್ರತಿಯೊಬ್ಬ ಬೀದಿಬದಿ ವ್ಯಾಪಾರಿಯು, ವ್ಯಾಪಾರ ವಲಯಗಳಲ್ಲಿ ಒದಗಿಸಲಾದ ನಾಗರಿಕ ಸೌಕರ್ಯಗಳು ಮತ್ತು ಸೌಲಭ್ಯಗಳಿಗಾಗಿ ಸ್ಥಳೀಯ ಪ್ರಾಧಿಕಾರವು ನಿರ್ಧರಿಸಬಹುದಾದಂಥ ನಿಯತಕಾಲಿಕ ನಿರ್ವಹಣಾ ವೆಚ್ಚಗಳನ್ನು ಸಂದಾಯ ಮಾಡತಕ್ಕದ್ದು.

## ಅಧ್ಯಾಯ IV

## ಬೀದಿಬದಿ ವ್ಯಾಪಾರಿಗಳನ್ನು ಸ್ಥಳಾಂತರಿಸುವುದು ಮತ್ತು ಹೊರಹಾಕುವುದು

**18. ಬೀದಿಬದಿ ವ್ಯಾಪಾರಿಗಳನ್ನು ಸ್ಥಳಾಂತರಿಸುವುದು ಮತ್ತು ಹೊರಹಾಕುವುದು.–** (1) ಸ್ಥಳೀಯ ಪ್ರಾಧಿಕಾರವು, ಪಟ್ಟಣ ವ್ಯಾಪಾರ ಸಮಿತಿಯ ಶಿಫಾರಸ್ಸುಗಳ ಮೇರೆಗೆ, ಯಾವುದೇ ಸಾರ್ವಜನಿಕ ಉದ್ದೇಶಕ್ಕಾಗಿ ವಲಯ ಅಥವಾ ಅದರ ಭಾಗವನ್ನು ವ್ಯಾಪಾರೇತರ ವಲಯವೆಂದು ಘೋಷಿಸಬಹುದು ಮತ್ತು ಸ್ಕೀಮ್‌ನಲ್ಲಿ ನಿರ್ದಿಷ್ಟಪಡಿಸಬಹುದಾದಂಥ ರೀತಿಯಲ್ಲಿ ಹೊಸ ಸ್ಥಳಗಳಿಗೆ ಆ ಪ್ರದೇಶದಲ್ಲಿನ ಬೀದಿಬದಿ ವ್ಯಾಪಾರಿಗಳನ್ನು ಸ್ಥಳಾಂತರಿಸಬಹುದು.

(2) ಸ್ಥಳೀಯ ಪ್ರಾಧಿಕಾರವು, ಸ್ಕೀಮ್‌ನಲ್ಲಿ ನಿರ್ದಿಷ್ಟಪಡಿಸಬಹುದಾದಂಥ ರೀತಿಯಲ್ಲಿ 10ನೇ ಪ್ರಕರಣದ ಮೇರೆಗೆ ಯಾವ ಬೀದಿಬದಿ ವ್ಯಾಪಾರಿಯ ವ್ಯಾಪಾರ ಪ್ರಮಾಣಪತ್ರವನ್ನು ರದ್ದುಪಡಿಸಲಾಗಿದೆಯೋ ಅಂಥ ವ್ಯಾಪಾರಿಯನ್ನು ಅಥವಾ ವ್ಯಾಪಾರ ಪ್ರಮಾಣಪತ್ರವನ್ನು ಹೊಂದಿಲ್ಲದಿರುವ ಮತ್ತು ಅಂಥ ಪ್ರಮಾಣಪತ್ರ ಇಲ್ಲದೆ ವ್ಯಾಪಾರ ಮಾಡುತ್ತಿರುವಂಥ ಬೀದಿಬದಿ ವ್ಯಾಪಾರಿಗಳನ್ನು ಹೊರಹಾಕತಕ್ಕದ್ದು.

(3) ಸ್ಥಳೀಯ ಪ್ರಾಧಿಕಾರವು, ಯಾರೇ ಬೀದಿಬದಿ ವ್ಯಾಪಾರಿಯನ್ನು, ಸ್ಕೀಮ್‌ನಲ್ಲಿ ನಿರ್ದಿಷ್ಟಪಡಿಸಬಹುದಾದಂಥ ರೀತಿಯಲ್ಲಿ, ಅವನಿಗೆ ಮೂವತ್ತು ದಿನಗಳ ನೋಟೀಸನ್ನು ನೀಡಿದ ಹೊರತು ವ್ಯಾಪಾರ ಪ್ರಮಾಣಪತ್ರದಲ್ಲಿ ನಿರ್ದಿಷ್ಟಪಡಿಸಿದ ಸ್ಥಳದಿಂದ ಸ್ಥಳಾಂತರಿಸತಕ್ಕದ್ದಲ್ಲ ಅಥವಾ ಹೊರಹಾಕತಕ್ಕದ್ದಲ್ಲ.

(4) ಬೀದಿಬದಿ ವ್ಯಾಪಾರಿಯನ್ನು, ನೋಟೀಸಿನಲ್ಲಿ ನಿರ್ದಿಷ್ಟಪಡಿಸಿದ ಅವಧಿ ಮುಕ್ತಾಯವಾದ ನಂತರ, ವ್ಯಾಪಾರ ಪ್ರಮಾಣಪತ್ರದಲ್ಲಿ ನಿರ್ದಿಷ್ಟಪಡಿಸಿದ ಸ್ಥಳವನ್ನು ಖಾಲಿ ಮಾಡಲು ತಪ್ಪಿದ್ದ ನಂತರ ಮಾತ್ರವೇ ಸ್ಕೀಮ್‌ನಲ್ಲಿ ನಿರ್ದಿಷ್ಟಪಡಿಸಬಹುದಾದಂಥ ರೀತಿಯಲ್ಲಿ ಸ್ಥಳೀಯ ಪ್ರಾಧಿಕಾರವು ವಾಸ್ತವಿಕವಾಗಿ ಸ್ಥಳಾಂತರಿಸತಕ್ಕದ್ದು ಅಥವಾ ಹೊರಹಾಕತಕ್ಕದ್ದು.

(5) ನೋಟೀಸಿನಲ್ಲಿ ನಿರ್ದಿಷ್ಟಪಡಿಸಿದ ಅವಧಿ ಮುಕ್ತಾಯವಾದ ನಂತರ ವ್ಯಾಪಾರ ಪ್ರಮಾಣಪತ್ರದಲ್ಲಿ ನಿರ್ದಿಷ್ಟಪಡಿಸಿದ ಸ್ಥಳವನ್ನು ಸ್ಥಳಾಂತರಿಸಲು ಅಥವಾ ಖಾಲಿ ಮಾಡಲು ತಪ್ಪಿದ ಪ್ರತಿಯೊಬ್ಬ ಬೀದಿಬದಿ ವ್ಯಾಪಾರಿಯು, ಹಾಗೆ ತಪ್ಪಿದ ಪ್ರತಿ ದಿನಕ್ಕಾಗಿ, ಸ್ಥಳೀಯ ಪ್ರಾಧಿಕಾರವು ನಿರ್ಧರಿಸಬಹುದಾದಂತೆ ಇನ್ನೂರೈವತ್ತು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ದಂಡವನ್ನು ಪಾವತಿಸಲು ಬದ್ಧನಾಗಿರತಕ್ಕದ್ದು. ಆದರೆ ದಂಡವು, ಜಪ್ತಿಯಾದ ಸರಕುಗಳ ಮೌಲ್ಯಕ್ಕಿಂತ ಹೆಚ್ಚಿರತಕ್ಕದ್ದಲ್ಲ.

**19. ಸರಕುಗಳನ್ನು ಜಪ್ತಿ ಮಾಡುವುದು ಮತ್ತು ಪುನಃ ಕ್ಲೇಮು ಮಾಡುವುದು.–** (1) 18ನೇ ಪ್ರಕರಣದ (3)ನೇ ಉಪಪ್ರಕರಣದ ಮೇರೆಗೆ ನೀಡಿದ ನೋಟೀಸಿನಲ್ಲಿ ನಿರ್ದಿಷ್ಟಪಡಿಸಿದ ಅವಧಿಯು ಪೂರ್ಣಗೊಂಡ ನಂತರ ವ್ಯಾಪಾರ ಪ್ರಮಾಣಪತ್ರದಲ್ಲಿ ನಿರ್ದಿಷ್ಟಪಡಿಸಿದ ಸ್ಥಳವನ್ನು ಖಾಲಿ ಮಾಡಲು ಬೀದಿಬದಿ ವ್ಯಾಪಾರಿಯು ವಿಫಲನಾದರೆ, ಸ್ಥಳೀಯ ಪ್ರಾಧಿಕಾರವು, 18ನೇ ಪ್ರಕರಣದ ಮೇರೆಗೆ ಬೀದಿಬದಿ ವ್ಯಾಪಾರಿಯನ್ನು ತೆರವುಗೊಳಿಸುವುದರ ಜೊತೆಗೆ, ಅವಶ್ಯವೆಂದು ತಾನು ಭಾವಿಸಿದರೆ ಸ್ಕೀಮ್‌ನಲ್ಲಿ ನಿರ್ದಿಷ್ಟಪಡಿಸಬಹುದಾದಂಥ ರೀತಿಯಲ್ಲಿ ಅಂಥ ಬೀದಿಬದಿ ವ್ಯಾಪಾರಿಯ ಸರಕುಗಳನ್ನು ಜಪ್ತಿ ಮಾಡಬಹುದು:

ಪರಂತು, ಅಂಥ ಯಾವುವೇ ಸರಕುಗಳನ್ನು ಜಪ್ತಿ ಮಾಡಿರುವಲ್ಲಿ, ಜಪ್ತಿ ಮಾಡಲಾದ ಸರಕುಗಳ ಪಟ್ಟಿಯನ್ನು ಸ್ಕೀಮ್‌ನಲ್ಲಿ ನಿರ್ದಿಷ್ಟಪಡಿಸಲಾದಂತೆ ಸಿದ್ಧಪಡಿಸತಕ್ಕದ್ದು ಮತ್ತು ಸರಕುಗಳನ್ನು ಜಪ್ತಿ ಮಾಡಲು ಅಧಿಕೃತಗೊಂಡ ವ್ಯಕ್ತಿಯು ಯುಕ್ತವಾಗಿ ಸಹಿ ಮಾಡಿ, ಅದರ ಒಂದು ಪ್ರತಿಯನ್ನು ಬೀದಿಬದಿ ವ್ಯಾಪಾರಿಗೆ ನೀಡತಕ್ಕದ್ದು.

(2) ಉಪಪ್ರಕರಣ (1)ರ ಮೇರೆಗೆ ಯಾವ ಬೀದಿಬದಿ ವ್ಯಾಪಾರಿಯ ಸರಕುಗಳನ್ನು ಜಪ್ತಿ ಮಾಡಲಾಗಿದೆಯೋ ಆ ಬೀದಿಬದಿ ವ್ಯಾಪಾರಿಯ ಸರಕುಗಳನ್ನು, ಸ್ಕೀಮ್‌ನಲ್ಲಿ ನಿರ್ದಿಷ್ಟಪಡಿಸಬಹುದಾದಂಥ ರೀತಿಯಲ್ಲಿ ಮತ್ತು ಅಂಥ ಫೀಜುಗಳನ್ನು ಸಂದಾಯ ಮಾಡಿದ ನಂತರ ಅವನು ತನ್ನ ಸರಕುಗಳನ್ನು ಪುನಃ ಕ್ಲೇಮು ಮಾಡಬಹುದು:

ಪರಂತು, ಕೆಟ್ಟುಹೋಗದ ಸರಕುಗಳ ಸಂದರ್ಭದಲ್ಲಿ, ಸ್ಥಳೀಯ ಪ್ರಾಧಿಕಾರವು ಬೀದಿಬದಿ ವ್ಯಾಪಾರಿಯು ಕ್ಲೇಮು ಮಾಡಿದ ದಿನದಿಂದ ಎರಡು ಕೆಲಸದ ದಿನಗಳೊಳಗಾಗಿ ಸರಕುಗಳನ್ನು ಬಿಡುಗಡೆ ಮಾಡತಕ್ಕದ್ದು ಮತ್ತು ಕೆಟ್ಟು ಹೋಗುವ ಸರಕುಗಳ ಸಂದರ್ಭದಲ್ಲಿ, ಸ್ಥಳೀಯ ಪ್ರಾಧಿಕಾರವು, ಬೀದಿಬದಿ ವ್ಯಾಪಾರಿಯು ಕ್ಲೇಮು ಮಾಡಿರುವ ದಿನದಂದೇ ಸರಕುಗಳನ್ನು ಬಿಡುಗಡೆ ಮಾಡತಕ್ಕದ್ದು.

## ಅಧ್ಯಾಯ V

## ವಿವಾದ ನಿವಾರಣಾ ವ್ಯವಸ್ಥೆ

**20. ಬೀದಿಬದಿ ವ್ಯಾಪಾರಿಗಳ ಕುಂದುಕೊರತೆಗಳನ್ನು ನಿವಾರಿಸುವುದು ಅಥವಾ ವಿವಾದಗಳನ್ನು ಬಗೆಹರಿಸುವುದು.–** (1) ಸಮುಚಿತ ಸರ್ಕಾರವು, (2)ನೇ ಉಪಪ್ರಕರಣದ ಮೇರೆಗೆ ಸ್ವೀಕರಿಸಿದ ಅರ್ಜಿಗಳನ್ನು ತೀರ್ಮಾನಿಸುವ ಉದ್ದೇಶಕ್ಕಾಗಿ ಸಿವಿಲ್ ನ್ಯಾಯಾಧೀಶನಾಗಿರುವ ಅಥವಾ ನ್ಯಾಯಿಕ ಮ್ಯಾಜಿಸ್ಟ್ರೇಟ್‌ನಾಗಿರುವ ಒಬ್ಬ ಅಧ್ಯಕ್ಷನನ್ನು ಮತ್ತು ನಿಯಮಿಸಬಹುದಾದಂಥ ಅನುಭವ ಹೊಂದಿರುವ ಇತರ ಇಬ್ಬರು ವೃತ್ತಿಗರನ್ನು ಒಳಗೊಂಡಿರುವ ಒಂದು ಅಥವಾ ಅದಕ್ಕಿಂತ ಹೆಚ್ಚು ಸಮಿತಿಗಳನ್ನು ರಚಿಸಬಹುದು:

ಪರಂತು, ಸಮುಚಿತ ಸರ್ಕಾರದ ಅಥವಾ ಸ್ಥಳೀಯ ಪ್ರಾಧಿಕಾರದ ಯಾರೇ ನೌಕರನನ್ನು ಸಮಿತಿಯ ಸದಸ್ಯನನ್ನಾಗಿ ನೇಮಕ ಮಾಡತಕ್ಕದ್ದಲ್ಲ.

(2) ಕುಂದುಕೊರತೆ ಅಥವಾ ವಿವಾದ ಹೊಂದಿರುವ ಪ್ರತಿಯೊಬ್ಬ ಬೀದಿಬದಿ ವ್ಯಾಪಾರಿಯು, (1)ನೇ ಉಪಪ್ರಕರಣದ ಮೇರೆಗೆ ರಚಿತವಾದ ಸಮಿತಿಗೆ, ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ರೀತಿಯಲ್ಲಿ ಲಿಖಿತದಲ್ಲಿ ಅರ್ಜಿಯನ್ನು ಸಲ್ಲಿಸಬಹುದು.

(3) ಉಪಪ್ರಕರಣ (2)ರ ಮೇರೆಗೆ ಕುಂದುಕೊರತೆಯನ್ನು ಅಥವಾ ವಿವಾದವನ್ನು ಸ್ವೀಕರಿಸಿದ ಮೇಲೆ, (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ಸಮಿತಿಯು, ನಿಯಮಿಸಬಹುದಾದಂಥ ರೀತಿಯಲ್ಲಿ ಪರಿಶೀಲಿಸಿದ ಮತ್ತು ವಿಚಾರಣೆ ನಡೆಸಿದ ನಂತರ, ನಿಯಮಿಸಬಹುದಾದಂಥ ಅವಧಿಯೊಳಗಾಗಿ ಮತ್ತು ಅಂಥ ರೀತಿಯಲ್ಲಿ, ಅಂಥ ಕುಂದುಕೊರತೆಯ ನಿವಾರಣೆಗಾಗಿ ಅಥವಾ ಅಂಥ ವಿವಾದವನ್ನು ನಿವಾರಿಸುವುದಕ್ಕಾಗಿ ಕ್ರಮಗಳನ್ನು ಕೈಗೊಳ್ಳತಕ್ಕದ್ದು.

(4) ಸಮಿತಿಯ ನಿರ್ಧಾರದಿಂದ ಬಾಧಿತನಾಗಿರುವ ಯಾರೇ ವ್ಯಕ್ತಿಯು, ನಿಯಮಿಸಬಹುದಾದಂಥ ನಮೂನೆಯಲ್ಲಿ, ಅಂಥ ಕಾಲದೊಳಗೆ ಮತ್ತು ಅಂಥ ರೀತಿಯಲ್ಲಿ ಸ್ಥಳೀಯ ಪ್ರಾಧಿಕಾರಕ್ಕೆ ಅಪೀಲು ಸಲ್ಲಿಸಬಹುದು.

(5) ಸ್ಥಳೀಯ ಪ್ರಾಧಿಕಾರವು, (4)ನೇ ಉಪಪ್ರಕರಣದ ಮೇರೆಗೆ ಸ್ವೀಕರಿಸಿದ ಅಪೀಲನ್ನು ನಿಯಮಿಸಬಹುದಾದಂಥ ಕಾಲದೊಳಗೆ ಮತ್ತು ಅಂಥ ರೀತಿಯಲ್ಲಿ ವಿಲೆ ಮಾಡತಕ್ಕದ್ದು:

ಪರಂತು, ಸ್ಥಳೀಯ ಪ್ರಾಧಿಕಾರವು, ಅಪೀಲನ್ನು ವಿಲೆ ಮಾಡುವ ಮುಂಚೆ, ಬಾಧಿತನಾದ ವ್ಯಕ್ತಿಗೆ ತನ್ನ ಅಹವಾಲನ್ನು ಹೇಳಿಕೊಳ್ಳಲು ಅವಕಾಶವನ್ನು ನೀಡತಕ್ಕದ್ದು.

## ಅಧ್ಯಾಯ VI

### ಬೀದಿಬದಿ ವ್ಯಾಪಾರ ನಡೆಸುವುದಕ್ಕಾಗಿ ಯೋಜನೆ

**21. ಬೀದಿಬದಿ ವ್ಯಾಪಾರ ಮಾಡುವುದಕ್ಕಾಗಿ ಯೋಜನೆ.–** (1) ಪ್ರತಿಯೊಂದು ಸ್ಥಳೀಯ ಪ್ರಾಧಿಕಾರವು, ಯೋಜನಾ ಪ್ರಾಧಿಕಾರದೊಂದಿಗೆ ಸಮಾಲೋಚಿಸಿ ಮತ್ತು ಪಟ್ಟಣ ವ್ಯಾಪಾರ ಸಮಿತಿಯ ಶಿಫಾರಸ್ಸುಗಳ ಮೇರೆಗೆ, ಪ್ರತಿ ಐದು ವರ್ಷಗಳಿಗೊಮ್ಮೆ ಒಂದನೇ ಅನುಸೂಚಿಯಲ್ಲಿ ಒಳಗೊಂಡ ವಿಷಯಗಳನ್ನು ಒಳಗೊಳ್ಳುವ, ಬೀದಿಬದಿ ವ್ಯಾಪಾರಿಗಳ ವೃತ್ತಿಯನ್ನು ಉತ್ತೇಜಿಸಲು ಯೋಜನೆಯನ್ನು ಸಿದ್ಧಪಡಿಸತಕ್ಕದ್ದು.

(2) ಸ್ಥಳೀಯ ಪ್ರಾಧಿಕಾರವು, ಬೀದಿಬದಿ ವ್ಯಾಪಾರಕ್ಕಾಗಿ ಸಿದ್ಧಪಡಿಸಿದ ಯೋಜನೆಗೆ ಅನುಮೋದನೆ ಪಡೆಯಲು ಅದನ್ನು ಸಮುಚಿತ ಸರ್ಕಾರಕ್ಕೆ ಸಲ್ಲಿಸತಕ್ಕದ್ದು ಮತ್ತು ಸರ್ಕಾರವು ಯೋಜನೆಯನ್ನು ಅಧಿಸೂಚಿಸುವ ಮುಂಚೆ ಬೀದಿಬದಿ ವ್ಯಾಪಾರಿಗಳಿಗೆ ಅನ್ವಯವಾಗಬಹುದಾದ ಮಾನದಂಡಗಳನ್ನು ನಿರ್ಧರಿಸತಕ್ಕದ್ದು.

## ಅಧ್ಯಾಯ VII

### ಪಟ್ಟಣ ವ್ಯಾಪಾರ ಸಮಿತಿ

**22. ಪಟ್ಟಣ ವ್ಯಾಪಾರ ಸಮಿತಿ.–** (1) ಸಮುಚಿತ ಸರ್ಕಾರವು ಈ ಬಗ್ಗೆ ರಚಿಸಿದ ನಿಯಮಗಳ ಮೂಲಕ, ಪ್ರತಿಯೊಂದು ಸ್ಥಳೀಯ ಪ್ರಾಧಿಕಾರದಲ್ಲಿ ಪಟ್ಟಣ ವ್ಯಾಪಾರ ಸಮಿತಿಯ ಪದಾವಧಿ ಮತ್ತು ರಚಿಸುವ ರೀತಿಯ ಬಗ್ಗೆ ಉಪಬಂಧ ಕಲ್ಪಿಸಬಹುದು:

ಪರಂತು, ಸಮುಚಿತ ಸರ್ಕಾರವು, ಅವಶ್ಯವೆಂದು ಪರ್ಯಾಲೋಚಿಸಿದರೆ, ಒಂದಕ್ಕಿಂತ ಹೆಚ್ಚು ಪಟ್ಟಣ ವ್ಯಾಪಾರ ಸಮಿತಿಗಳನ್ನು ಅಥವಾ ಪ್ರತಿಯೊಂದು ವಲಯಕ್ಕಾಗಿ ಅಥವಾ ವಾರ್ಡಿಗಾಗಿ ಪಟ್ಟಣ ವ್ಯಾಪಾರ ಸಮಿತಿಯನ್ನು ರಚಿಸುವುದಕ್ಕಾಗಿ ಉಪಬಂಧಿಸಬಹುದು.

(2) ಪ್ರತಿಯೊಂದು ಪಟ್ಟಣ ವ್ಯಾಪಾರ ಸಮಿತಿಯು,–

(ಎ) ಅಧ್ಯಕ್ಷರಾಗಿ ಸಂದರ್ಭಾನುಸಾರ, ಪೌರಸಭಾ ಆಯುಕ್ತರನ್ನು ಅಥವಾ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯನ್ನು; ಮತ್ತು

(ಬಿ) ಸಮುಚಿತ ಸರ್ಕಾರವು, ನಿಯಮಿಸಬಹುದಾದಂತೆ, ನಾಮನಿರ್ದೇಶಿಸಬೇಕಾದ ಸ್ಥಳೀಯ ಪ್ರಾಧಿಕಾರದ ಪ್ರತಿನಿಧಿಗಳು, ಸ್ಥಳೀಯ ಪ್ರಾಧಿಕಾರದ ವೈದ್ಯಾಧಿಕಾರಿಯನ್ನು, ಯೋಜನಾ ಪ್ರಾಧಿಕಾರದ ಸಂಚಾರಿ ಪೊಲೀಸ್, ಪೊಲೀಸ್, ಬೀದಿಬದಿ ವ್ಯಾಪಾರಿಗಳ ಸಂಘವನ್ನು, ಮಾರುಕಟ್ಟೆ ಸಂಘಗಳನ್ನು, ವ್ಯಾಪಾರಿಗಳ ಸಂಘಗಳನ್ನು, ಸರ್ಕಾರೇತರ ಸಂಘ ಸಂಸ್ಥೆಗಳನ್ನು, ಸಂಘಟನೆ ಆಧಾರಿತ ಸಮುದಾಯಗಳ ನಿವಾಸಿ ಕ್ಷೇಮಾಭಿವೃದ್ಧಿ ಸಂಘಗಳನ್ನು, ಬ್ಯಾಂಕುಗಳನ್ನು ಮತ್ತು ಯುಕ್ತವೆಂದು ತಾನು ಭಾವಿಸಬಹುದಾದಂಥ ಇತರ ಹಿತಾಸಕ್ತಿಗಳನ್ನು ಪ್ರತಿನಿಧಿಸುವ ಇತರ ಸದಸ್ಯರ ಸಂಖ್ಯೆಯನ್ನು;

(ಸಿ) ಸರ್ಕಾರೇತರ ಸಂಘಟನೆಗಳನ್ನು ಮತ್ತು ಸಮುದಾಯಾಧಾರಿತ ಸಂಘಟನೆಗಳನ್ನು ಪ್ರತಿನಿಧಿಸುವ, ಶೇಕಡ ಹತ್ತಕ್ಕಿಂತ ಕಡಿಮೆಯಾಗಿರದಷ್ಟು ಸಂಖ್ಯೆಯ ನಾಮನಿರ್ದೇಶಿತ ಸದಸ್ಯರನ್ನು;

(ಡಿ) ಬೀದಿಬದಿ ವ್ಯಾಪಾರಿಗಳು, ನಿಯಮಿಸಬಹುದಾದಂಥ ರೀತಿಯಲ್ಲಿ ಸ್ವತಃ ತಾವೇ ಆಯ್ಕೆ ಮಾಡಿದ ಬೀದಿಬದಿ ವ್ಯಾಪಾರಿಗಳನ್ನು ಪ್ರತಿನಿಧಿಸುವ ಶೇಕಡ ನಲ್ವತ್ತಕ್ಕಿಂತ ಕಡಿಮೆಯಾಗಿರದಷ್ಟು ಸಂಖ್ಯೆಯ ಸದಸ್ಯರನ್ನು

– ಒಳಗೊಂಡಿರತಕ್ಕದ್ದು:

ಪರಂತು, ಬೀದಿಬದಿ ವ್ಯಾಪಾರಿಗಳನ್ನು ಪ್ರತಿನಿಧಿಸುವ ಸದಸ್ಯರ ಮೂರನೇ ಒಂದರಷ್ಟು ಮಹಿಳಾ ವ್ಯಾಪಾರಿಗಳು ಇರತಕ್ಕದ್ದು:

ಮತ್ತು ಪರಂತು, ಬೀದಿಬದಿ ವ್ಯಾಪಾರಿಗಳನ್ನು ಪ್ರತಿನಿಧಿಸುವ ಸದಸ್ಯರುಗಳಲ್ಲಿ ಅನುಸೂಚಿತ ಜಾತಿಗಳಿಗೆ, ಅನುಸೂಚಿತ ಪಂಗಡಗಳಿಗೆ, ಇತರೆ ಹಿಂದುಳಿದ ವರ್ಗಗಳಿಗೆ, ಅಲ್ಪಸಂಖ್ಯಾತರಿಗೆ ಮತ್ತು ಅಂಗವಿಕಲತೆಯುಳ್ಳ ವ್ಯಕ್ತಿಗಳಿಗೆ ಯುಕ್ತ ಪ್ರಾತಿನಿಧ್ಯವನ್ನು ನೀಡತಕ್ಕದ್ದು.

(3) ಉಪಪ್ರಕರಣ (2)ರ ಮೇರೆಗೆ ನಾಮನಿರ್ದೇಶಿತನಾದ ಅಧ್ಯಕ್ಷ ಮತ್ತು ಸದಸ್ಯರು ಸಮುಚಿತ ಸರ್ಕಾರವು ನಿಯಮಿಸಬಹುದಾದಂಥ ಭತ್ಯೆಗಳನ್ನು ಪಡೆಯತಕ್ಕದ್ದು.

**23. ಪಟ್ಟಣ ವ್ಯಾಪಾರ ಸಮಿತಿಯ ಸಭೆಗಳು.–** (1) ಪಟ್ಟಣ ವ್ಯಾಪಾರ ಸಮಿತಿಯು, ಸ್ಥಳೀಯ ಪ್ರಾಧಿಕಾರದ ಅಧಿಕಾರವ್ಯಾಪ್ತಿಯೊಳಗೆ ನಿಯಮಿಸಬಹುದಾದಂಥ ಸಮಯದಲ್ಲಿ ಮತ್ತು ಸ್ಥಳಗಳಲ್ಲಿ ಸಭೆ ಸೇರತಕ್ಕದ್ದು ಮತ್ತು ಅದರ ಸಭೆಗಳಲ್ಲಿನ ಕಾರ್ಯಕಲಾಪಗಳ ನಿರ್ವಹಣೆಗೆ ಸಂಬಂಧಿಸಿದಂತೆ, ನಿಯಮಿಸಬಹುದಾದಂಥ ಪ್ರಕ್ರಿಯಾ ನಿಯಮಗಳನ್ನು ಪಾಲಿಸತಕ್ಕದ್ದು ಮತ್ತು ಅಂಥ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು.

(2) ಪಟ್ಟಣ ವ್ಯಾಪಾರ ಸಮಿತಿ ತೆಗೆದುಕೊಳ್ಳುವ ಪ್ರತಿಯೊಂದು ನಿರ್ಧಾರವನ್ನು, ಅಂಥ ನಿರ್ಧಾರವನ್ನು ತೆಗೆದುಕೊಳ್ಳುವುದಕ್ಕಾಗಿ ಇರುವ ಕಾರಣಗಳೊಂದಿಗೆ ಅಧಿಸೂಚಿಸತಕ್ಕದ್ದು.

**24. ನಿರ್ದಿಷ್ಟ ಉದ್ದೇಶಗಳಿಗಾಗಿ, ಪಟ್ಟಣ ವ್ಯಾಪಾರ ಸಮಿತಿಯೊಂದಿಗೆ ವ್ಯಕ್ತಿಗಳನ್ನು ತಾತ್ಕಾಲಿಕವಾಗಿ ಸೇರಿಸಿಕೊಳ್ಳುವುದು.–** (1) ಪಟ್ಟಣ ವ್ಯಾಪಾರ ಸಮಿತಿಯು, ಈ ಅಧಿನಿಯಮದ ಯಾವುದೇ ಉಪಬಂಧಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ಅದು ಯಾವ ವ್ಯಕ್ತಿಯ ನೆರವು ಅಥವಾ ಸಲಹೆಯನ್ನು ಪಡೆಯಲು ಇಚ್ಛಿಸುವುದೋ, ಆ ವ್ಯಕ್ತಿಯನ್ನು ನಿಯಮಿಸಬಹುದಾದಂಥ ರೀತಿಯಲ್ಲಿ ಮತ್ತು ಅಂಥ ಉದ್ದೇಶಗಳಿಗಾಗಿ ತನ್ನೊಂದಿಗೆ ಸೇರಿಸಿಕೊಳ್ಳಬಹುದು.

(2) ಉಪಪ್ರಕರಣ (1)ರ ಮೇರೆಗೆ ಸೇರಿಸಿಕೊಳ್ಳಲಾದ ವ್ಯಕ್ತಿಗೆ ನಿಯಮಿಸಬಹುದಾದಂಥ ಭತ್ಯೆಗಳನ್ನು ಸಂದಾಯ ಮಾಡತಕ್ಕದ್ದು.

**25. ಪಟ್ಟಣ ವ್ಯಾಪಾರ ಸಮಿತಿಗಾಗಿ ಕಚೇರಿ ಸ್ಥಳಾವಕಾಶ ಮತ್ತು ಇತರ ನೌಕರರು.–** ಸ್ಥಳೀಯ ಪ್ರಾಧಿಕಾರವು ಪಟ್ಟಣ ವ್ಯಾಪಾರ ಸಮಿತಿಗೆ ನಿಯಮಿಸಬಹುದಾದಂತೆ ಸೂಕ್ತ ಕಚೇರಿ ಸ್ಥಳಾವಕಾಶವನ್ನು ಮತ್ತು ಅಂಥ ನೌಕರರನ್ನು ಒದಗಿಸತಕ್ಕದ್ದು.

**26. ಬೀದಿಬದಿ ವ್ಯಾಪಾರಿಯ ಸನ್ನದು ಮತ್ತು ದತ್ತಾಂಶ ಸಂಗ್ರಹದ ಪ್ರಕಟಣೆ ಮತ್ತು ಸಾಮಾಜಿಕ ಲೆಕ್ಕಪರಿಶೋಧನೆ ನಡೆಸುವುದು.–** (1) ಪ್ರತಿಯೊಂದು ಪಟ್ಟಣ ವ್ಯಾಪಾರ ಸಮಿತಿಯು, ಬೀದಿಬದಿ ವ್ಯಾಪಾರಿಗೆ ವ್ಯಾಪಾರ ಪ್ರಮಾಣಪತ್ರವನ್ನು ಯಾವ ಕಾಲದೊಳಗೆ ನೀಡತಕ್ಕದ್ದೋ, ಆ ಕಾಲವನ್ನು ಅದರಲ್ಲಿ ನಿರ್ದಿಷ್ಟಪಡಿಸಿ ವ್ಯಾಪಾರಿಯ ಸನ್ನದನ್ನು ಮತ್ತು ಅಂಥ ವ್ಯಾಪಾರ ಪ್ರಮಾಣಪತ್ರವನ್ನು ಯಾವ ಕಾಲದೊಳಗೆ ನವೀಕರಿಸತಕ್ಕದ್ದೋ, ಆ ಕಾಲವನ್ನು ಮತ್ತು ಅದರಲ್ಲಿ ನಿರ್ದಿಷ್ಟಪಡಿಸಿದ ಕಾಲಪರಿಮಿತಿಯೊಳಗೆ ನಿರ್ವಹಿಸಬೇಕಾದ ಇತರ ಚಟುವಟಿಕೆಗಳನ್ನು ಪ್ರಕಟಿಸತಕ್ಕದ್ದು.

(2) ಪ್ರತಿಯೊಂದು ಪಟ್ಟಣ ವ್ಯಾಪಾರ ಸಮಿತಿಯು, ಅಂಥ ಬೀದಿಬದಿ ವ್ಯಾಪಾರಿಯ ಹೆಸರು, ಆತನಿಗೆ ಹಂಚಿಕೆಯಾದ ಮಳಿಗೆ, ಆತನು ನಡೆಸುವ ವ್ಯವಹಾರಗಳ ಸ್ವರೂಪ, ಬೀದಿಬದಿ ವ್ಯಾಪಾರಿಯ ಪ್ರವರ್ಗ ಮತ್ತು ಬೀದಿಬದಿ ವ್ಯಾಪಾರಿಗಳಿಗೆ ಸುಸಂಗತವಾಗಿರಬಹುದಾದಂಥ ಇತರ ನಿರ್ದಿಷ್ಟ ವಿವರಗಳನ್ನು ಒಳಗೊಂಡಿರುವ, ನೋಂದಾಯಿತ ಬೀದಿಬದಿ ವ್ಯಾಪಾರಿಗಳ ಮತ್ತು ವ್ಯಾಪಾರ ಪ್ರಮಾಣಪತ್ರವನ್ನು ಯಾರಿಗೆ ನೀಡಲಾಗಿದೆಯೋ, ಆ ಬೀದಿಬದಿ ವ್ಯಾಪಾರಿಗಳ ತಹಲ್‌ವರೆಗಿನ (ಅಪ್‌ಡೇಟ್) ದಾಖಲೆಗಳನ್ನು ನಿಯಮಿಸಬಹುದಾದಂಥ ರೀತಿಯಲ್ಲಿ ನಿರ್ವಹಿಸತಕ್ಕದ್ದು.

(3) ಪ್ರತಿಯೊಂದು ಪಟ್ಟಣ ವ್ಯಾಪಾರ ಸಮಿತಿಯು, ಅಧಿನಿಯಮ ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳ ಅಥವಾ ಸ್ಕೀಮ್‌ಗಳ ಮೇರೆಗೆ, ಸ್ಕೀಮ್‌ನಲ್ಲಿ ನಿರ್ದಿಷ್ಟಪಡಿಸಬಹುದಾದಂಥ ನಮೂನೆಯಲ್ಲಿ ಅಥವಾ ರೀತಿಯಲ್ಲಿ ತನ್ನ ಕಾರ್ಯಚಟುವಟಿಕೆಗಳ ಸಾಮಾಜಿಕ ಲೆಕ್ಕಪರಿಶೋಧನೆ ಮಾಡತಕ್ಕದ್ದು.

## ಅಧ್ಯಾಯ VIII

### ಬೀದಿಬದಿ ವ್ಯಾಪಾರಿಗಳಿಗೆ ಆಗುವ ಕಿರುಕುಳವನ್ನು ತಡೆಗಟ್ಟುವುದು

**27. ಪೊಲೀಸ್ ಮತ್ತು ಇತರ ಪ್ರಾಧಿಕಾರಿಗಳಿಂದ ಕಿರುಕುಳವನ್ನು ತಡೆಗಟ್ಟುವುದು.–** ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ, ವ್ಯಾಪಾರ ಪ್ರಮಾಣಪತ್ರದ ನಿಬಂಧನೆಗಳಿಗೆ ಮತ್ತು ಷರತ್ತುಗಳಿಗೆ ಅನುಸಾರವಾಗಿ ಬೀದಿಬದಿ ವ್ಯಾಪಾರ ಚಟುವಟಿಕೆಗಳನ್ನು ನಡೆಸುತ್ತಿರುವ ಯಾರೇ ಬೀದಿಬದಿ ವ್ಯಾಪಾರಿಯು, ಹಕ್ಕನ್ನು ಚಲಾಯಿಸುವುದರಿಂದ ಅವನನ್ನು, ಯಾರೇ ವ್ಯಕ್ತಿ, ಪೊಲೀಸ್ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಕಾನೂನಿನ ಮೇರೆಗೆ ಅಧಿಕಾರಗಳನ್ನು ಚಲಾಯಿಸುವ ಇತರ ಯಾವುದೇ ಪ್ರಾಧಿಕಾರವು ಪ್ರತಿಬಂಧಿಸತಕ್ಕದ್ದಲ್ಲ.

## ಅಧ್ಯಾಯ IX

### ದಂಡನೆಯ ಉಪಬಂಧಗಳು

**28. ಉಪಬಂಧಗಳನ್ನು ಉಲ್ಲಂಘಿಸಿರುವುದಕ್ಕಾಗಿ ದಂಡನೆ.–** ಯಾರೇ ಬೀದಿಬದಿ ವ್ಯಾಪಾರಿಯು,–

(ಎ) ವ್ಯಾಪಾರ ಪ್ರಮಾಣಪತ್ರವಿಲ್ಲದೇ ವ್ಯಾಪಾರ ಚಟುವಟಿಕೆಗಳಲ್ಲಿ ತೊಡಗಿದ್ದರೆ;

(ಬಿ) ವ್ಯಾಪಾರ ಪ್ರಮಾಣಪತ್ರದ ನಿಬಂಧನೆಗಳನ್ನು ಉಲ್ಲಂಘಿಸಿದರೆ; ಅಥವಾ

(ಸಿ) ಈ ಅಧಿನಿಯಮ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮಗಳ ಅಥವಾ ಸ್ಕೀಮ್‌ಗಳ ಮೇರೆಗೆ ಬೀದಿಬದಿ ವ್ಯಾಪಾರವನ್ನು ವಿನಿಯಮಿಸುವ ಉದ್ದೇಶಕ್ಕಾಗಿ ನಿರ್ದಿಷ್ಟಪಡಿಸಿದ ಇತರ ಯಾವುದೇ ನಿಬಂಧನೆಗಳು ಮತ್ತು ಷರತ್ತುಗಳನ್ನು ಉಲ್ಲಂಘಿಸಿದರೆ

– ಅವನು ಅಂಥ ಪ್ರತಿಯೊಂದು ಅಪರಾಧಕ್ಕಾಗಿ ಸ್ಥಳೀಯ ಪ್ರಾಧಿಕಾರವು ನಿರ್ಧರಿಸಬಹುದಾದಂತೆ ಎರಡು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ದಂಡನೆಗೆ ಗುರಿಯಾಗತಕ್ಕದ್ದು.

## ಅಧ್ಯಾಯ X

### ಸಂಕೀರ್ಣ

**29. ಈ ಅಧಿನಿಯಮದ ಉಪಬಂಧಗಳು, ಮಾಲೀಕತ್ವದ ಹಕ್ಕುಗಳು ಮುಂತಾದವುಗಳನ್ನು ಪ್ರದಾನ ಮಾಡುತ್ತವೆಂದು ಅರ್ಥೈಸುವಂತಿಲ್ಲ.–** (1) ಈ ಅಧಿನಿಯಮದಲ್ಲಿ ಇರುವುದು ಯಾವುದೂ ಅವನಿಗೆ ಹಂಚಿಕೆ ಮಾಡಿದ ವ್ಯಾಪಾರ ವಲಯಗಳಲ್ಲಿ ಅಥವಾ ಅವನು ಅಂಥ ವ್ಯಾಪಾರ ಚಟುವಟಿಕೆ ನಡೆಸುತ್ತಿರುವ ಯಾವುದೇ ಸ್ಥಳದ ಸಂಬಂಧದಲ್ಲಿ ವ್ಯಾಪಾರ ಚಟುವಟಿಕೆಗಳನ್ನು ನಡೆಸುವ ಯಾವುದೇ ತಾತ್ಕಾಲಿಕ, ಖಾಯಂ ಅಥವಾ ಶಾಶ್ವತ ಹಕ್ಕನ್ನು, ಬೀದಿಬದಿ ವ್ಯಾಪಾರಿಗೆ ಪ್ರದಾನ ಮಾಡಲಾಗಿದೆ ಎಂದು ಅರ್ಥೈಸತಕ್ಕದ್ದಲ್ಲ.

(2) ಉಪಪ್ರಕರಣದಲ್ಲಿ (1)ರಲ್ಲಿ ಇರುವುದು ಯಾವುದೂ, ಅಂಥ ಬೀದಿಬದಿ ವ್ಯಾಪಾರ ಚಟುವಟಿಕೆಯನ್ನು ನಡೆಸುವುದಕ್ಕಾಗಿ, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಉಪಬಂಧಗಳಿಗನುಸಾರವಾಗಿ ಅಂಥ ವ್ಯಾಪಾರ ಚಟುವಟಿಕೆಗಳನ್ನು ನಡೆಸುವ ಬೀದಿಬದಿ ವ್ಯಾಪಾರಿಗೆ, ನಿರ್ದಿಷ್ಟಪಡಿಸಿದ ಸ್ಥಳದ ಸಂಬಂಧದಲ್ಲಿ ಗುತ್ತಿಗೆ ಪತ್ರದ ಮೂಲಕ ಅಥವಾ ಅನ್ಯಥಾ, ತಾತ್ಕಾಲಿಕ ಗುತ್ತಿಗೆ ಅಥವಾ ಮಾಲೀಕತ್ವವನ್ನು ಪ್ರದಾನ ಮಾಡಲಾಗಿದ್ದರೆ, ಅಂಥ ಯಾರೇ ಸ್ಥಾಯೀ ವ್ಯಾಪಾರಿಗೆ ಅನ್ವಯವಾಗತಕ್ಕದ್ದಲ್ಲ.

**30. ವಿವರಣಪಟ್ಟಿ.–** ಪ್ರತಿಯೊಂದು ಪಟ್ಟಣ ವ್ಯಾಪಾರ ಸಮಿತಿಯು, ಕಾಲಕಾಲಕ್ಕೆ ಸಮುಚಿತ ಸರ್ಕಾರಕ್ಕೆ ಮತ್ತು ಸ್ಥಳೀಯ ಪ್ರಾಧಿಕಾರಕ್ಕೆ ನಿಯಮಿಸಬಹುದಾದಂಥ ವಿವರಣಪಟ್ಟಿಗಳನ್ನು ಒದಗಿಸತಕ್ಕದ್ದು.

**31. ಉತ್ತೇಜಕ ಕ್ರಮಗಳು.–** ಸಮುಚಿತ ಸರ್ಕಾರವು, ಪಟ್ಟಣ ವ್ಯಾಪಾರ ಸಮಿತಿ, ಸ್ಥಳೀಯ ಪ್ರಾಧಿಕಾರ, ಯೋಜನಾ ಪ್ರಾಧಿಕಾರ ಮತ್ತು ಬೀದಿಬದಿ ವ್ಯಾಪಾರಿಗಳ ಸಂಘಗಳು ಅಥವಾ ಒಕ್ಕೂಟಗಳು, ಇವುಗಳೊಡನೆ ಸಮಾಲೋಚಿಸಿ, ಬೀದಿಬದಿ

ವ್ಯಾಪಾರಿಗಳಿಗಾಗಿ, ಸಾಲಸೌಲಭ್ಯ (ಕ್ರೆಡಿಟ್), ವಿಮೆ ಮತ್ತು ಸಾಮಾಜಿಕ ಭದ್ರತೆಯ ಇತರ ಕಲ್ಯಾಣ ಸ್ಕೀಮ್‌ಗಳು ಲಭ್ಯವಾಗುವಂಥ ಉತ್ತೇಜಕ ಕ್ರಮಗಳನ್ನು ಕೈಗೊಳ್ಳಬಹುದು.

**32. ಸಂಶೋಧನೆ, ತರಬೇತಿ ಮತ್ತು ಅರಿವು ಮೂಡಿಸುವುದು.–** ಸಮುಚಿತ ಸರ್ಕಾರವು, ಹಣಕಾಸು ಮತ್ತು ಇತರೆ ಸಂಪನ್ಮೂಲಗಳು ಲಭ್ಯವಿರುವಷ್ಟರ ಮಟ್ಟಿಗೆ,–

(ಎ) ಈ ಅಧಿನಿಯಮದ ಮೇರೆಗೆ ತಿಳಿಸಿದ ಹಕ್ಕುಗಳನ್ನು ಚಲಾಯಿಸಲು ಸಾಧ್ಯವಾಗುವಂತೆ ಬೀದಿಬದಿ ವ್ಯಾಪಾರಿಗಳಿಗೆ ಸಾಮರ್ಥ್ಯವೃದ್ಧಿ ಕಾರ್ಯಕ್ರಮಗಳನ್ನು ಏರ್ಪಡಿಸಬಹುದು;

(ಬಿ) ಸಾಮಾನ್ಯವಾಗಿ ಮತ್ತು ಅದರಲ್ಲೂ ವಿಶೇಷವಾಗಿ, ಬೀದಿಬದಿ ವ್ಯಾಪಾರಿಗಳು ಅರ್ಥವ್ಯವಸ್ಥೆಯಲ್ಲಿ ಅನೌಪಚಾರಿಕ ವಲಯದ ಪಾತ್ರದ ಬಗ್ಗೆ ಹೆಚ್ಚಿನ ಜ್ಞಾನವನ್ನು ಮತ್ತು ತಿಳುವಳಿಕೆಯನ್ನು ಪಡೆಯುವುದಕ್ಕಾಗಿ ಸಂಶೋಧನೆ, ಶಿಕ್ಷಣ ಮತ್ತು ತರಬೇತಿ ನೀಡುವ ಮತ್ತು ಸಾರ್ವಜನಿಕರಲ್ಲಿ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಕೈಗೊಳ್ಳಬಹುದು.

**33. ಅಧಿನಿಯಮವು, ಅಧ್ಯಾರೋಹಿ ಪರಿಣಾಮವನ್ನು ಹೊಂದಿರುವುದು.–** ಈ ಅಧಿನಿಯಮದ ಉಪಬಂಧಗಳು ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನಲ್ಲಿ ಅಥವಾ ಈ ಅಧಿನಿಯಮದ ಹೊರತಾಗಿ ಇತರ ಯಾವುದೇ ಕಾನೂನಿನ ಬಲದಿಂದ ಪರಿಣಾಮಕಾರಿಯಾಗಿರುವ ಯಾವುದೇ ಲಿಖಿತದಲ್ಲಿ ಒಳಗೊಂಡಿರುವುದಕ್ಕೆ ಅಸಂಗತವಾದುದು ಏನೇ ಇದ್ದರೂ ಪರಿಣಾಮಕಾರಿಯಾಗಿರತಕ್ಕದ್ದು.

**34. ಪ್ರತ್ಯಾಯೋಜನೆಗಾಗಿ ಅಧಿಕಾರಗಳು.–** ಸಮುಚಿತ ಸರ್ಕಾರವು, ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ, ಲಿಖಿತ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಷರತ್ತುಗಳೇನಾದರೂ ಇದ್ದರೆ, ಅವುಗಳಿಗೆ ಒಳಪಟ್ಟು, ಸ್ಥಳೀಯ ಪ್ರಾಧಿಕಾರಕ್ಕೆ ಅಥವಾ ಪಟ್ಟಣ ವ್ಯಾಪಾರ ಸಮಿತಿಗೆ ಅಥವಾ ಇತರ ಯಾರೇ ಅಧಿಕಾರಿಗೆ, ಈ ಅಧಿನಿಯಮದ ಮೇರೆಗೆ (36ನೇ ಪ್ರಕರಣದ ಮೇರೆಗೆ ನಿಯಮಗಳನ್ನು ರಚಿಸುವ ಅಧಿಕಾರ ಮತ್ತು 38ನೇ ಪ್ರಕರಣದ ಮೇರೆಗೆ ಸ್ಕೀಮ್‌ಗಳನ್ನು ರೂಪಿಸುವ ಅಧಿಕಾರವನ್ನು ಹೊರತುಪಡಿಸಿ) ಅವಶ್ಯವೆಂದು ಅದು ಭಾವಿಸಬಹುದಾದಂಥ ಅಧಿಕಾರಗಳನ್ನು ಮತ್ತು ಪ್ರಕಾರ್ಯಗಳನ್ನು ಪ್ರತ್ಯಾಯೋಜಿಸಬಹುದು.

**35. ಅನುಸೂಚಿಗಳನ್ನು ತಿದ್ದುಪಡಿ ಮಾಡುವ ಅಧಿಕಾರ.–** (1) ಸಮುಚಿತ ಸರ್ಕಾರವು ಮಾಡಿದ ಶಿಫಾರಸ್ಸುಗಳ ಮೇರೆಗೆ ಅಥವಾ ಅನ್ಯಥಾ ಅನುಸೂಚಿಗಳನ್ನು ತಿದ್ದುಪಡಿ ಮಾಡುವುದು ಅಗತ್ಯವೆಂದು ಅಥವಾ ವಿಹಿತವೆಂದು ಕೇಂದ್ರ ಸರ್ಕಾರಕ್ಕೆ ಮನದಟ್ಟಾದರೆ, ಅದು ಹಾಗೆ ಅನುಸೂಚಿಗಳನ್ನು ತಿದ್ದುಪಡಿ ಮಾಡಬಹುದು ಮತ್ತು ಆ ನಂತರ, ಸಂದರ್ಭಾನುಸಾರ ಮೊದಲನೇ ಅನುಸೂಚಿ ಅಥವಾ ಎರಡನೇ ಅನುಸೂಚಿಗಳು ತದನುಸಾರವಾಗಿ ತಿದ್ದುಪಡಿಯಾಗಿವೆ ಎಂದು ಭಾವಿಸತಕ್ಕದ್ದು.

(2) ಉಪಪ್ರಕರಣ (1)ರ ಮೇರೆಗೆ ಹೊರಡಿಸಿದ ಪ್ರತಿಯೊಂದು ಅಧಿಸೂಚನೆಯ ಪ್ರತಿಯನ್ನು, ಅದನ್ನು ಹೊರಡಿಸಿದ ತರುವಾಯ ಆದಷ್ಟು ಬೇಗನೆ ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಮಂಡಿಸತಕ್ಕದ್ದು.

**36. ನಿಯಮಗಳನ್ನು ರಚಿಸಲು ಅಧಿಕಾರ.–** (1) ಸಮುಚಿತ ಸರ್ಕಾರವು, ಈ ಅಧಿನಿಯಮ ಪ್ರಾರಂಭವಾದ ದಿನಾಂಕದಿಂದ ಒಂದು ವರ್ಷದ ಒಳಗಾಗಿ, ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ಅಧಿಸೂಚನೆಯ ಮೂಲಕ ನಿಯಮಗಳನ್ನು ರಚಿಸತಕ್ಕದ್ದು.

(2) ವಿಶೇಷವಾಗಿ ಮತ್ತು ಈ ಹಿಂದೆ ಹೇಳಿದ ಅಧಿಕಾರದ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ, ಅಂಥ ನಿಯಮಗಳಲ್ಲಿ ಈ ಕೆಳಕಂಡ ಎಲ್ಲ ಅಥವಾ ಯಾವುವೇ ವಿಷಯಗಳ ಬಗ್ಗೆ ಉಪಬಂಧ ಕಲ್ಪಿಸಬಹುದು, ಎಂದರೆ:–

(ಎ) 4ನೇ ಪ್ರಕರಣದ (1)ನೇ ಉಪಪ್‌ರಕರಣದ ಮೇರೆಗೆ ಬೀದಿಬದಿ ವ್ಯಾಪಾರ ಮಾಡುವುದಕ್ಕಾಗಿ ಇರಬೇಕಾದ ವಯಸ್ಸು;

(ಬಿ) 11ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಸ್ಥಳೀಯ ಪ್ರಾಧಿಕಾರಕ್ಕೆ ಅಪೀಲು ಸಲ್ಲಿಸುವ ನಮೂನೆ, ಅವಧಿ ಮತ್ತು ರೀತಿ;

(ಸಿ) 20ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ, ವ್ಯಕ್ತಿಗಳು ಮತ್ತು ಅಂಥ ವ್ಯಕ್ತಿಯು ಹೊಂದಿರತಕ್ಕ ಅನುಭವ;

(ಡಿ) 20ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಸಲ್ಲಿಸಬೇಕಾದ ಅರ್ಜಿಯ ನಮೂನೆ ಮತ್ತು ರೀತಿ;

(ಇ) ಕುಂದುಕೊರತೆ ಅಥವಾ ವಿವಾದವನ್ನು ಸ್ವೀಕರಿಸಿದ ಮೇಲೆ, ಸತ್ಯಾಪನೆ ಮಾಡುವ ಮತ್ತು ವಿಚಾರಣೆ ನಡೆಸುವ ರೀತಿಯನ್ನು, 20ನೇ ಪ್ರಕರಣದ (3)ನೇ ಉಪಪ್ರಕರಣದ ಮೇರೆಗೆ, ಯಾವ ಕಾಲದೊಳಗೆ ಮತ್ತು ಯಾವ ರೀತಿಯಲ್ಲಿ ಕುಂದುಕೊರತೆಗಳ ನಿವಾರಣೆಗಾಗಿ ಮತ್ತು ವಿವಾದಗಳ ತೀರ್ಮಾನಕ್ಕಾಗಿ ಕ್ರಮ ಕೈಗೊಳ್ಳಬಹುದೋ ಆ ಅವಧಿ ಮತ್ತು ರೀತಿ;

(ಎಫ್) 20ನೇ ಪ್ರಕರಣದ (4)ನೇ ಉಪಪ್ರಕರಣದ ಮೇರೆಗೆ, ಯಾವ ನಮೂನೆಯಲ್ಲಿ, ಯಾವ ಕಾಲದೊಳಗೆ ಮತ್ತು ಯಾವ ರೀತಿಯಲ್ಲಿ ಅಪೀಲನ್ನು ಸಲ್ಲಿಸತಕ್ಕದ್ದೋ ಆ ನಮೂನೆ, ಅವಧಿ ಮತ್ತು ರೀತಿ;

(ಜಿ) 20ನೇ ಪ್ರಕರಣದ (5)ನೇ ಉಪಪ್ರಕರಣದ ಮೇರೆಗೆ ಯಾವ ಅವಧಿಯೊಳಗೆ ಮತ್ತು ಯಾವ ರೀತಿಯಲ್ಲಿ ಅಪೀಲನ್ನು ವಿಲೆ ಮಾಡತಕ್ಕದ್ದೋ ಆ ಅವಧಿ ಮತ್ತು ರೀತಿ;

(ಹೆಚ್) 22ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಪಟ್ಟಣ ವ್ಯಾಪಾರ ಸಮಿತಿಯ ಅವಧಿ ಮತ್ತು ಅದನ್ನು ರಚಿಸುವ ರೀತಿ;

(ಐ) 22ನೇ ಪ್ರಕರಣದ (2)ನೇ ಉಪಪ್ರಕರಣದ (ಬಿ) ಖಂಡದ ಮೇರೆಗೆ ಪಟ್ಟಣ ವ್ಯಾಪಾರ ಸಮಿತಿಯ ಇತರ ಸದಸ್ಯರುಗಳ ಸಂಖ್ಯೆ;

(ಜೆ) 22ನೇ ಪ್ರಕರಣದ (2)ನೇ ಉಪಪ್ರಕರಣದ (ಡಿ) ಖಂಡದ ಮೇರೆಗೆ ಬೀದಿಬದಿ ವ್ಯಾಪಾರಿಗಳೊಳಗೆ ಚುನಾವಣೆಗಳನ್ನು ನಡೆಸುವ ರೀತಿ;

(ಕೆ) 22ನೇ ಪ್ರಕರಣದ (3)ನೇ ಉಪಪ್ರಕರಣದ ಮೇರೆಗೆ ಅಧ್ಯಕ್ಷರಿಗೆ ಮತ್ತು ಸದಸ್ಯರಿಗೆ ಭತ್ಯೆಗಳು;

(ಎಲ್) 23ನೇ ಪ್ರಕರಣದ ಮೇರೆಗೆ, ಪಟ್ಟಣ ವ್ಯಾಪಾರ ಸಮಿತಿಯು, ಸಭೆ ನಡೆಸುವ ಕಾಲ ಮತ್ತು ಸ್ಥಳ ಮತ್ತು ಸಭೆಗಳಲ್ಲಿ ನಿರ್ವಹಿಸಬೇಕಾದ ಕಾರ್ಯಕಲಾಪಗಳ ಕಾರ್ಯವಿಧಾನ ಮತ್ತು ಪ್ರಕಾರ್ಯಗಳು;

(ಎಂ) 24ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ, ಯಾವ ರೀತಿಯಲ್ಲಿ ಮತ್ತು ಯಾವ ಉದ್ದೇಶಕ್ಕಾಗಿ ವ್ಯಕ್ತಿಯನ್ನು ಸೇರಿಸಿಕೊಳ್ಳಬಹುದೋ ಆ ರೀತಿ ಮತ್ತು ಉದ್ದೇಶ;

(ಎನ್) 24ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಸೇರಿಸಿಕೊಂಡ ವ್ಯಕ್ತಿಗೆ ಸಂದಾಯ ಮಾಡಬೇಕಾದ ಭತ್ಯೆಗಳು;

(ಓ) 25ನೇ ಪ್ರಕರಣದ ಮೇರೆಗೆ ಪಟ್ಟಣ ವ್ಯಾಪಾರ ಸಮಿತಿಯ ಇತರೆ ನೌಕರರು;

(ಪಿ) 26ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಎಲ್ಲ ಬೀದಿಬದಿ ವ್ಯಾಪಾರಿಗಳ ತಹಲ್‌ವರೆಗಿನ ದಾಖಲೆಯನ್ನು ನಿರ್ವಹಿಸುವ ರೀತಿ;

(ಕ್ಯೂ) 30ನೇ ಪ್ರಕರಣದ ಮೇರೆಗೆ ಒದಗಿಸಬೇಕಾದ ವಿವರಪಟ್ಟಿಕೆಗಳು;

(ಆರ್) 38ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಸ್ಕೀಮ್‌ನ ಸಾರಾಂಶವನ್ನು ಪ್ರಕಟಿಸುವ ರೀತಿ.

(3) ಈ ಅಧಿನಿಯಮದ ಮೇರೆಗೆ ಕೇಂದ್ರ ಸರ್ಕಾರವು, ರಚಿಸಿದ ಪ್ರತಿಯೊಂದು ನಿಯಮವನ್ನು ಮತ್ತು ಸ್ಕೀಮ್ ಅನ್ನು, ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ, ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಅದು ಅಧಿವೇಶನದಲ್ಲಿರುವಾಗ, ಒಂದು ಅಧಿವೇಶನದಲ್ಲಿ ಅಥವಾ ಒಂದಾದ ಮೇಲೊಂದರಂತೆ ಅನುಕ್ರಮವಾಗಿ ಬರುವ ಎರಡು ಅಥವಾ ಅದಕ್ಕಿಂತ ಹೆಚ್ಚಿನ ಅಧಿವೇಶನಗಳಲ್ಲಿ

ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಇಡತಕ್ಕದ್ದು ಮತ್ತು ಹಿಂದೆ ಹೇಳಿದ ಅಧಿವೇಶನವು ಅಥವಾ ಒಂದಾದ ಮೇಲೊಂದರಂತೆ ಅನುಕ್ರಮವಾಗಿ ಬರುವ ಅಧಿವೇಶನಗಳ ನಿಕಟೋತ್ತರದ ಅಧಿವೇಶನವು ಮುಕ್ತಾಯವಾಗುವುದಕ್ಕೆ ಮುಂಚೆ ಆ ನಿಯಮದಲ್ಲಿ ಅಥವಾ ಸ್ಕೀಮ್‌ನಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ, ಅಥವಾ ಆ ನಿಯಮವನ್ನು ಅಥವಾ ಸ್ಕೀಮ್ ಅನ್ನು ಮಾಡಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಆ ತರುವಾಯ ಆ ನಿಯಮವು ಅಥವಾ ಸ್ಕೀಮ್ ಸಂದರ್ಭಾನುಸಾರ ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ; ಆದಾಗ್ಯೂ, ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು ಆ ನಿಯಮದ ಅಥವಾ ಸ್ಕೀಮ್‌ನ ಮೇರೆಗೆ ಈ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವನ್ನುಂಟು ಮಾಡತಕ್ಕದ್ದಲ್ಲ.

(4) ಈ ಅಧಿನಿಯಮದ ಮೇರೆಗೆ ರಾಜ್ಯ ಸರ್ಕಾರವು, ರಚಿಸಿದ ಪ್ರತಿಯೊಂದು ನಿಯಮವನ್ನು ಅಥವಾ ಸ್ಕೀಮ್ ಅನ್ನು, ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ, ರಾಜ್ಯ ವಿಧಾನಮಂಡಲವು ಆ ಎರಡು ಸದನಗಳನ್ನು ಹೊಂದಿರುವಲ್ಲಿ, ಪ್ರತಿಯೊಂದು ಸದನದ ಮುಂದೆ ಮತ್ತು ಒಂದೇ ಸದನವು ಇರುವಲ್ಲಿ ವಿಧಾನಮಂಡಲದ ಆ ಸದನದ ಮುಂದೆ ಇಡತಕ್ಕದ್ದು.

**37. ಉಪವಿಧಿಗಳನ್ನು ರಚಿಸಲು ಅಧಿಕಾರ.–** ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮದ ಅಥವಾ ಸ್ಕೀಮ್‌ನ ಉಪಬಂಧಗಳಿಗೆ ಒಳಪಟ್ಟು, ಸ್ಥಳೀಯ ಪ್ರಾಧಿಕಾರವು, ಈ ಕೆಳಕಂಡ ಎಲ್ಲ ಅಥವಾ ಯಾವುದೇ ವಿಷಯಗಳಿಗಾಗಿ ಆ ಉಪವಿಧಿಗಳನ್ನು ರಚಿಸಬಹುದು, ಎಂದರೆ:–

(ಎ) ನಿರ್ಬಂಧಮುಕ್ತ–ವ್ಯಾಪಾರ ವಲಯಗಳಲ್ಲಿ, ನಿರ್ಬಂಧಿತ ವ್ಯಾಪಾರ ವಲಯಗಳಲ್ಲಿ ಮತ್ತು ಗೊತ್ತುಪಡಿಸಿದ ವ್ಯಾಪಾರ ವಲಯಗಳಲ್ಲಿ ವ್ಯಾಪಾರ ವಿನಿಯಮನ ಮತ್ತು ರೀತಿ;

(ಬಿ) 17ನೇ ಪ್ರಕರಣದ ಮೇರೆಗೆ ವ್ಯಾಪಾರ ವಲಯಗಳಲ್ಲಿನ ನಾಗರಿಕ ಸೌಕರ್ಯ ಮತ್ತು ಸೌಲಭ್ಯಗಳಿಗಾಗಿ, ಮಾಸಿಕ ನಿರ್ವಹಣಾ ವೆಚ್ಚ ನಿರ್ಧರಿಸುವುದು;

(ಸಿ) 18ನೇ ಪ್ರಕರಣದ (5)ನೇ ಉಪಪ್ರಕರಣದ ಮತ್ತು 28ನೇ ಪ್ರಕರಣದ ಮೇರೆಗೆ ದಂಡವನ್ನು ನಿರ್ಧರಿಸುವುದು;

(ಡಿ) ವ್ಯಾಪಾರ ವಲಯಗಳಲ್ಲಿ ತೆರಿಗೆಗಳ ಮತ್ತು ಫೀಜುಗಳ ಸಂಗ್ರಹಣೆಯ ವಿನಿಯಮನ;

(ಇ) ವ್ಯಾಪಾರ ವಲಯಗಳಲ್ಲಿ ಸಂಚಾರ ವಿನಿಯಮನ;

(ಎಫ್) ವ್ಯಾಪಾರ ವಲಯಗಳಲ್ಲಿ ಸಾರ್ವಜನಿಕರಿಗೆ ಒದಗಿಸಿದ ಉತ್ಪನ್ನಗಳ ಮತ್ತು ಸೇವೆಗಳ ಗುಣಮಟ್ಟದ ವಿನಿಯಮನ ಮತ್ತು ಜನಾರೋಗ್ಯ, ಸ್ವಚ್ಛತೆ ಮತ್ತು ಸುರಕ್ಷತಾ ಮಾನದಂಡಗಳನ್ನು ಕಾಯ್ದುಕೊಂಡು ಬರುವುದು;

(ಜಿ) ವ್ಯಾಪಾರ ವಲಯಗಳಲ್ಲಿ ನಾಗರಿಕ ಸೇವೆಗಳ ವಿನಿಯಮನ; ಮತ್ತು

(ಎಚ್) ವ್ಯಾಪಾರ ವಲಯಗಳಲ್ಲಿ ಅವಶ್ಯವಿರಬಹುದಾದಂಥ ಇತರೆ ವಿಷಯಗಳ ವಿನಿಯಮನ.

**38. ಬೀದಿಬದಿ ವ್ಯಾಪಾರಿಗಳಿಗಾಗಿ ಸ್ಕೀಮ್.–** (1) ಈ ಅಧಿನಿಯಮದ ಉದ್ದೇಶಗಳಿಗಾಗಿ, ಸಮುಚಿತ ಸರ್ಕಾರವು, ಅಧಿಸೂಚನೆಯ ಮೂಲಕ ಈ ಅಧಿನಿಯಮದ ಪ್ರಾರಂಭದ ದಿನಾಂಕದಿಂದ ಆರು ತಿಂಗಳೊಳಗಾಗಿ, ಸ್ಥಳೀಯ ಪ್ರಾಧಿಕಾರ ಮತ್ತು ಪಟ್ಟಣ ವ್ಯಾಪಾರ ಸಮಿತಿಯೊಂದಿಗೆ ಯುಕ್ತ ಸಮಾಲೋಚನೆ ನಡೆಸಿದ ನಂತರ, ಎರಡನೇ ಅನುಸೂಚಿಯಲ್ಲಿ ಉಪಬಂಧಿಸಿದ ಎಲ್ಲ ಅಥವಾ ಯಾವುವೇ ವಿಷಯಗಳಿಗಾಗಿ ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದ ಸ್ಕೀಮ್ ಅನ್ನು ರಚಿಸತಕ್ಕದ್ದು.

(2) ಉಪಪ್ರಕರಣ (1)ರ ಮೇರೆಗೆ ಸಮುಚಿತ ಸರ್ಕಾರವು ಅಧಿಸೂಚಿಸಿದ ಸ್ಕೀಮ್‌ನ ಸಾರಾಂಶವನ್ನು, ಕನಿಷ್ಠಪಕ್ಷ ಎರಡು ಸ್ಥಳೀಯ ವೃತ್ತಪತ್ರಿಕೆಗಳಲ್ಲಿ ಸ್ಥಳೀಯ ಪ್ರಾಧಿಕಾರವು ನಿಯಮಿಸಬಹುದಾದಂಥ ರೀತಿಯಲ್ಲಿ ಪ್ರಕಟಿಸತಕ್ಕದ್ದು.

**39. ತೊಂದರೆಗಳನ್ನು ನಿವಾರಿಸಲು ಅಧಿಕಾರ.–** (1) ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೆ ತರುವಲ್ಲಿ ಯಾವುದೇ ತೊಂದರೆಯು ಉದ್ಭವಿಸಿದರೆ, ಕೇಂದ್ರ ಸರ್ಕಾರವು ತೊಂದರೆಯನ್ನು ನಿವಾರಿಸಲು ಅವಶ್ಯವೆಂದು ಅಥವಾ ವಿಹಿತವೆಂದು ತನಗೆ

ಕಂಡುಬರುವಂಥ, ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಾಗಿರದಂಥ ಉಪಬಂಧಗಳನ್ನು ಆ ಬಗ್ಗೆ ರಾಜಪತ್ರದಲ್ಲಿ ಆದೇಶವನ್ನು ಪ್ರಕಟಿಸಿ ರಚಿಸಬಹುದು:

ಪರಂತು, ಈ ಅಧಿನಿಯಮದ ಪ್ರಾರಂಭದ ದಿನಾಂಕದಿಂದ ಮೂರು ವರ್ಷಗಳ ಅವಧಿಯು ಮುಕ್ತಾಯವಾದ ನಂತರ ಈ ಪ್ರಕರಣದ ಮೇರೆಗೆ ಯಾವುದೇ ಆದೇಶವನ್ನು ಮಾಡತಕ್ಕದ್ದಲ್ಲ.

(2) ಈ ಪ್ರಕರಣದ ಮೇರೆಗೆ ಮಾಡಿದ ಪ್ರತಿಯೊಂದು ಆದೇಶವನ್ನು, ಅದನ್ನು ಮಾಡಿದ ತರುವಾಯ, ಆದಷ್ಟು ಬೇಗನೆ, ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಇಡತಕ್ಕದ್ದು.

**ಮೊದಲನೇ ಅನುಸೂಚಿ**

**(21ನೇ ಪ್ರಕರಣವನ್ನು ನೋಡಿ)**

**ಬೀದಿಬದಿ ಮಾರಾಟಕ್ಕಾಗಿ ಯೋಜನೆ**

(1) ಬೀದಿಬದಿ ಮಾರಾಟಕ್ಕಾಗಿ ಯೋಜನೆಯು,–

(ಎ) ಸಮೀಕ್ಷೆಯಲ್ಲಿ ಗುರುತಿಸಲಾದ ಈಗ ಇರುವ ಎಲ್ಲ ಬೀದಿಬದಿ ವ್ಯಾಪಾರಿಗಳಿಗೆ, ಸಂದರ್ಭಾನುಸಾರ, ವಾರ್ಡ್, ವಲಯ, ಪಟ್ಟಣ ಅಥವಾ ನಗರದ ಜನಸಂಖ್ಯೆಯ ಶೇಕಡ ಎರಡೂವರೆಯಷ್ಟು ಪ್ರಮಾಣಕ್ಕೆ ಅನುಗುಣವಾಗಿ ವಿಧಿವಿಧಾನಗಳಿಗೊಳಪಟ್ಟು, ಬೀದಿಬದಿ ವ್ಯಾಪಾರಕ್ಕಾಗಿ ಯೋಜನೆಯಲ್ಲಿ ಸ್ಥಳಾವಕಾಶಗಳನ್ನು ಖಚಿತಪಡಿಸತಕ್ಕದ್ದು;

(ಬಿ) ಪಾದಚಾರಿಗಳು, ಮುಕ್ತವಾಗಿ ಓಡಾಡುವ ಮತ್ತು ಯಾವುದೇ ಅಡೆತಡೆಗಳು ಇಲ್ಲದೆ ರಸ್ತೆಗಳನ್ನು ಬಳಕೆ ಮಾಡುವ ಹಕ್ಕನ್ನು ಖಚಿತಪಡಿಸತಕ್ಕದ್ದು;

(ಸಿ) ಬೀದಿಬದಿ ವ್ಯಾಪಾರ ಮಾಡುವುದಕ್ಕಾಗಿ ಒದಗಿಸಿರುವ ಸ್ಥಳ ಅಥವಾ ಪ್ರದೇಶವು ಸೂಕ್ತವಾಗಿದೆಯೇ ಎಂಬುದನ್ನು ಮತ್ತು ಮಾರುಕಟ್ಟೆಗಳಿಗೆ ಸುಸಂಗತವಾಗಿದೆಯೇ ಎಂಬುದನ್ನು ಖಚಿತಪಡಿಸತಕ್ಕದ್ದು;

(ಡಿ) ವ್ಯಾಪಾರದ ಸ್ಥಳಗಳೆಂದು ಅಥವಾ ಪ್ರದೇಶಗಳೆಂದು ಗುರುತಿಸಲಾದ ಸ್ಥಳಗಳ ಯುಕ್ತ ಬಳಕೆಗಾಗಿ ಇರುವ ನಾಗರಿಕ ಸೌಲಭ್ಯಗಳನ್ನು ಗಮನಕ್ಕೆ ತೆಗೆದುಕೊಳ್ಳತಕ್ಕದ್ದು;

(ಇ) ಸರಕುಗಳ ವಿತರಣೆಯನ್ನು ಅನುಕೂಲಕರವಾಗಿ, ದಕ್ಷತೆಯಿಂದ ಮತ್ತು ಕಡಿಮೆ ಬೆಲೆಯಲ್ಲಿ ಸರಕುಗಳ ವಿತರಣೆಗೆ ಮತ್ತು ಸೇವೆ ಒದಗಿಸುವುದಕ್ಕೆ ಉತ್ತೇಜಿಸತಕ್ಕದ್ದು;

(ಎಫ್) ಬೀದಿಬದಿ ವ್ಯಾಪಾರಕ್ಕಾಗಿ ಯೋಜನೆಯನ್ನು ಜಾರಿಗೊಳಿಸುವುದಕ್ಕಾಗಿ ಸ್ಕೀಮ್‌ನಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಇತರ ವಿಷಯಗಳು.

(2) ಬೀದಿಬದಿ ವ್ಯಾಪಾರಕ್ಕಾಗಿ ಯೋಜನೆಯು ಈ ಕೆಳಕಂಡ ಎಲ್ಲಾ ಅಂಶಗಳನ್ನು ಒಳಗೊಂಡಿರತಕ್ಕದ್ದು, ಎಂದರೆ:–

(ಎ) ಬೀದಿಬದಿ ವ್ಯಾಪಾರಕ್ಕಾಗಿ ಪ್ರದೇಶ ಯೋಜನಾ ಪ್ರಮಾಣಕ್ಕೆ ಸಂಬಂಧಿಸಿದ ವಿಧಿವಿಧಾನಗಳನ್ನು ನಿರ್ಧರಿಸುವುದು;

(ಬಿ) ವ್ಯಾಪಾರ ವಲಯಗಳಿಗಾಗಿ ಸ್ಥಳ ಅಥವಾ ಪ್ರದೇಶವನ್ನು ಮೀಸಲಿಡುವುದು;

(ಸಿ) ವ್ಯಾಪಾರ ವಲಯಗಳನ್ನು, ನಿರ್ಬಂಧಮುಕ್ತ ವ್ಯಾಪಾರ ವಲಯಗಳು, ನಿರ್ಬಂಧ–ವ್ಯಾಪಾರ ವಲಯಗಳು ಮತ್ತು ವ್ಯಾಪಾರೇತರ ವಲಯಗಳು ಎಂಬುದಾಗಿ ನಿರ್ಧರಿಸುವುದು;

(ಡಿ) ಆ ನಗರದಲ್ಲಿ ಅಥವಾ ಪಟ್ಟಣದಲ್ಲಿ ಇರುವ ಪ್ರಸ್ತುತ ಬೀದಿಬದಿ ವ್ಯಾಪಾರಿಗಳ ಸಂಖ್ಯೆಗೆ ಅನುಸಾರವಾಗಿ ಮತ್ತು ಸಾಕಷ್ಟಾದ ಮತ್ತು ಭವಿಷ್ಯತ್ ಬೆಳವಣಿಗೆಗಳಿಗಾಗಿ ಸಹ ಅವಶ್ಯಕವಾಗಬಹುದಾದ ಅಂಥ ವಿಧಿವಿಧಾನಗಳನ್ನು ಅಳವಡಿಸಿಕೊಂಡು ಸ್ಥಳ ಪ್ರಮಾಣ ಯೋಜನೆಗಳನ್ನು ರಚಿಸುವುದು;

(ಇ) ಗೊತ್ತುಪಡಿಸಿದ ವ್ಯಾಪಾರ ವಲಯಗಳಲ್ಲಿ, ಬೀದಿಬದಿ ವ್ಯಾಪಾರಿಗಳಿಗೆ ಸ್ಥಳಾವಕಾಶ ಮಾಡಿಕೊಡುವುದಕ್ಕಾಗಿ ಅಸ್ತಿತ್ವದಲ್ಲಿರುವ ಮಹಾ ಯೋಜನೆಯಲ್ಲಿ, ಅಭಿವೃದ್ಧಿ ಯೋಜನೆಯಲ್ಲಿ, ವಲಯ ಯೋಜನೆಯಲ್ಲಿ, ಲೇಔಟ್ ಯೋಜನೆಯಲ್ಲಿ ಮತ್ತು ಇತರ ಯಾವುದೇ ಯೋಜನೆಯಲ್ಲಿ ಅಗತ್ಯವಾದ ಆನುಷಂಗಿಕವಾದ ಬದಲಾವಣೆಗಳನ್ನು ಮಾಡುವುದು.

(3) ಈ ಕೆಳಗಿನ ತತ್ವಗಳಿಗೆ ಒಳಪಟ್ಟು ಬೀದಿಬದಿ ವ್ಯಾಪಾರಕ್ಕಾಗಿ, ಯೋಜನೆಯ ಮೂಲಕ ಕೈಗೊಳ್ಳಲಾಗುವ ವ್ಯಾಪಾರೇತರ ವಲಯವನ್ನು ಘೋಷಿಸುವುದು,–

(ಎ) ಅಸ್ತಿತ್ವದಲ್ಲಿರುವ ಯಾವುದೇ ಮಾರುಕಟ್ಟೆಯನ್ನು ಅಥವಾ ಸಮೀಕ್ಷೆಯಲ್ಲಿ ಗುರುತಿಸಿದ ಸ್ವಾಭಾವಿಕ ಮಾರುಕಟ್ಟೆಯನ್ನು, ವ್ಯಾಪಾರೇತರ ವಲಯವೆಂದು ಘೋಷಿಸದಿರುವುದು;

(ಬಿ) ಯಾವ ರೀತಿಯಲ್ಲಿ ಕನಿಷ್ಠ ಶೇಕಡಾ ಸಂಖ್ಯೆಯ ಬೀದಿಬದಿ ವ್ಯಾಪಾರಿಗಳನ್ನು ಸ್ಥಳಾಂತರ ಮಾಡಬಹುದೋ ಆ ರೀತಿಯಲ್ಲಿ ವ್ಯಾಪಾರೇತರ ವಲಯವೆಂದು ಘೋಷಿಸುವುದು;

(ಸಿ) ಜನದಟ್ಟಣೆ ಇರುವ ಯಾವುದೇ ಸ್ಥಳವನ್ನು, ವ್ಯಾಪಾರೇತರ ವಲಯವಾಗಿ ಘೋಷಿಸುವುದಕ್ಕೆ ಆಧಾರವಾಗಿರತಕ್ಕದ್ದಲ್ಲ: ಪರಂತು, ಸಮೀಕ್ಷೆಯಲ್ಲಿ ಬೀದಿಬದಿ ವ್ಯಾಪಾರಿಗಳೆಂದು ಗುರುತಿಸದಿರುವ ವ್ಯಕ್ತಿಗಳಿಗೆ, ಅಂಥ ಪ್ರದೇಶದಲ್ಲಿ ವ್ಯಾಪಾರ ಪ್ರಮಾಣಪತ್ರ ನೀಡಿಕೆಯ ಬಗ್ಗೆ ನಿರ್ಬಂಧವನ್ನು ವಿಧಿಸಬಹುದು.

(ಡಿ) ನೈರ್ಮಲ್ಯ ಅಡ್ಡಿ ಆತಂಕಗಳು, ಬೀದಿಬದಿ ವ್ಯಾಪಾರಿಗಳು ಮಾತ್ರವೇ ಹೊಣೆಯೆಂದು ಆರೋಪಿಸಬಹುದಾಗಿದ್ದ ಹೊರತು ಮತ್ತು ಅವು ಸ್ಥಳೀಯ ಪ್ರಾಧಿಕಾರವು ಯುಕ್ತ ನಾಗರಿಕ ಕ್ರಮಗಳ ಮುಖಾಂತರ ಪರಿಹರಿಸಲಾಗದವುಗಳಾಗಿದ್ದ ಹೊರತು, ಯಾವುದೇ ಪ್ರದೇಶವನ್ನು ವ್ಯಾಪಾರೇತರ ವಲಯವೆಂದು ಘೋಷಿಸುವುದಕ್ಕೆ, ಅಂಥ ನೈರ್ಮಲ್ಯ ಅಡ್ಡಿ ಆತಂಕಗಳು ಆಧಾರವಾಗತಕ್ಕದ್ದಲ್ಲ;

(ಇ) ಸಮೀಕ್ಷೆಯನ್ನು ಕೈಗೊಳ್ಳದಿರುವ ಮತ್ತು ಬೀದಿಬದಿ ವ್ಯಾಪಾರ ಮಾಡುವುದಕ್ಕಾಗಿ ಯೋಜನೆಯನ್ನು ರೂಪಿಸಲಾಗದಿರದ ಅಂಥ ಕಾಲದವರೆಗೆ ಯಾವುದೇ ವಲಯವನ್ನು ವ್ಯಾಪಾರೇತರ ವಲಯವೆಂದು ಘೋಷಿಸತಕ್ಕದ್ದಲ್ಲ.

## ಎರಡನೇ ಅನುಸೂಚಿ

**(38ನೇ ಪ್ರಕರಣವನ್ನು ನೋಡಿ)**

ಸಮುಚಿತ ಸರ್ಕಾರವು, ಬೀದಿಬದಿ ವ್ಯಾಪಾರಿಗಳಿಗಾಗಿ ರಚಿಸಿದ ಸ್ಕೀಮ್‌ನಲ್ಲಿ, ಉಪಬಂಧ ಕಲ್ಪಿಸಬೇಕಾದ ವಿಷಯಗಳು:–

(ಎ) ಸಮೀಕ್ಷೆಯನ್ನು ನಡೆಸುವ ವಿಧಾನ;

(ಬಿ) ಸಮೀಕ್ಷೆಯಲ್ಲಿ ಗುರುತಿಸಿದ ಬೀದಿಬದಿ ವ್ಯಾಪಾರಿಗಳಿಗೆ ಯಾವ ಅವಧಿಯೊಳಗೆ ವ್ಯಾಪಾರದ ಪ್ರಮಾಣಪತ್ರವನ್ನು ನೀಡತಕ್ಕದ್ದೋ, ಆ ಅವಧಿ;

(ಸಿ) ಎರಡು ಸಮೀಕ್ಷೆಗಳ ಮಧ್ಯಂತರದ ಅವಧಿಯಲ್ಲಿ, ಬೀದಿಬದಿ ವ್ಯಾಪಾರ ಮಾಡಲು ಯಾವ ವ್ಯಕ್ತಿಗಳು ಇಚ್ಛಿಸುತ್ತಾರೆಯೋ, ಆ ವ್ಯಕ್ತಿಗಳು ಒಳಗೊಂಡಂತೆ, ಬೀದಿಬದಿ ವ್ಯಾಪಾರಿಗಳಿಗೆ, ಯಾವ ನಿಬಂಧನೆಗಳು ಮತ್ತು ಷರತ್ತುಗಳಿಗೆ ಒಳಪಟ್ಟು ವ್ಯಾಪಾರ ಪ್ರಮಾಣಪತ್ರವನ್ನು ನೀಡಬಹುದೋ ಆ ನಿಬಂಧನೆಗಳು ಮತ್ತು ಷರತ್ತುಗಳು;

(ಡಿ) ಯಾವ ನಮೂನೆಯಲ್ಲಿ ಮತ್ತು ರೀತಿಯಲ್ಲಿ ಬೀದಿಬದಿ ವ್ಯಾಪಾರಿಗೆ ವ್ಯಾಪಾರ ಪ್ರಮಾಣಪತ್ರ ನೀಡಬಹುದೋ ಆ ವ್ಯಾಪಾರ ಪ್ರಮಾಣಪತ್ರದ ನಮೂನೆ ಮತ್ತು ರೀತಿ;

(ಇ) ಬೀದಿಬದಿ ವ್ಯಾಪಾರಿಗಳಿಗೆ, ನೀಡಲಾಗುವ ಗುರುತಿನ ಚೀಟಿಗಳ ನಮೂನೆ ಮತ್ತು ವಿಧಾನ;

(ಎಫ್) ಬೀದಿಬದಿ ವ್ಯಾಪಾರಿಗಳಿಗೆ, ವ್ಯಾಪಾರ ಪ್ರಮಾಣಪತ್ರ ನೀಡಿಕೆಗಾಗಿ ಮಾನದಂಡಗಳು;

(ಜಿ) ಬೀದಿಬದಿ ವ್ಯಾಪಾರಿಗಳ ಪ್ರವರ್ಗಗಳ ಆಧಾರದ ಮೇಲೆ ಸಂದಾಯ ಮಾಡಬೇಕಾದ ವ್ಯಾಪಾರ–ಫೀಜುಗಳು, ಅದು ಬೇರೆಬೇರೆ ನಗರಗಳಲ್ಲಿ ಬೇರೆಬೇರೆ ಆಗಿರಬಹುದು;

(ಹೆಚ್) ವ್ಯಾಪಾರದ ಫೀಜುಗಳನ್ನು, ನಿರ್ವಹಣಾ ವೆಚ್ಚಗಳನ್ನು ಮತ್ತು ನೋಂದಣಿಗಾಗಿ, ಸಂಚಾರಿ ಮಳಿಗೆಗಳಿಗಾಗಿ ಪಾರ್ಕಿಂಗ್ ಸ್ಥಳದ ಬಳಕೆಗಾಗಿ ಮತ್ತು ಲಭ್ಯವಿರುವ ನಾಗರಿಕ ಸೇವೆಗಳಿಗಾಗಿ ಶುಲ್ಕಗಳನ್ನು ಮತ್ತು ದಂಡಗಳನ್ನು ಬ್ಯಾಂಕುಗಳ, ಸ್ಥಳೀಯ ಪ್ರಾಧಿಕಾರದ ಕೌಂಟರುಗಳ ಮತ್ತು ಪಟ್ಟಣ ವ್ಯಾಪಾರ ಸಮಿತಿಯ ಕೌಂಟರುಗಳ, ಮುಖಾಂತರ ಸಂಗ್ರಹಿಸುವ ವಿಧಾನ;

(ಐ) ವ್ಯಾಪಾರ ಪ್ರಮಾಣಪತ್ರದ ಸಿಂಧುತ್ವದ ಅವಧಿ;

(ಜೆ) ವ್ಯಾಪಾರ ಪ್ರಮಾಣಪತ್ರವನ್ನು, ಯಾವ ಅವಧಿಯವರೆಗೆ ಮತ್ತು ಯಾವ ರೀತಿಯಲ್ಲಿ ನವೀಕರಿಸಬಹುದೋ ಆ ಅವಧಿ ಮತ್ತು ರೀತಿ ಮತ್ತು ಅಂಥ ನವೀಕರಣಕ್ಕಾಗಿ ಫೀಜುಗಳು;

(ಕೆ) ಯಾವ ರೀತಿಯಲ್ಲಿ ವ್ಯಾಪಾರ ಪ್ರಮಾಣಪತ್ರವನ್ನು ಅಮಾನತ್ತಿನಲ್ಲಿಡಬಹುದೋ ಅಥವಾ ರದ್ದುಗೊಳಿಸಬಹುದೋ ಆ ರೀತಿ;

(ಎಲ್) ಸ್ಥಾಯೀ ವ್ಯಾಪಾರಿಗಳು ಮತ್ತು ಸಂಚಾರಿ ವ್ಯಾಪಾರಿಗಳನ್ನು ಹೊರತುಪಡಿಸಿ, ಬೀದಿಬದಿ ವ್ಯಾಪಾರಿಗಳ ಪ್ರವರ್ಗಗಳು;

(ಎಂ) ವ್ಯಾಪಾರ ಪ್ರಮಾಣಪತ್ರವನ್ನು ನೀಡಿಕೆಗಾಗಿ ಪ್ರಾಶಸ್ತ್ಯ ಪಡೆದ ವ್ಯಕ್ತಿಗಳ ಇತರ ಪ್ರವರ್ಗಗಳು;

(ಎನ್) ಯಾವ ಸಾರ್ವಜನಿಕ ಉದ್ದೇಶಕ್ಕಾಗಿ ಬೀದಿಬದಿ ವ್ಯಾಪಾರಿಯನ್ನು ಸ್ಥಳಾಂತರಿಸಬಹುದೋ ಆ ಉದ್ದೇಶ ಮತ್ತು ಬೀದಿಬದಿ ವ್ಯಾಪಾರಿಯನ್ನು ಸ್ಥಳಾಂತರಿಸುವ ವಿಧಾನ;

(ಓ) ಬೀದಿಬದಿ ವ್ಯಾಪಾರಿಯನ್ನು ಹೊರಹಾಕುವ ವಿಧಾನ;

(ಪಿ) ಬೀದಿಬದಿ ವ್ಯಾಪಾರಿಯನ್ನು ಹೊರಹಾಕುವುದಕ್ಕಾಗಿ ನೋಟೀಸ್ ನೀಡುವ ವಿಧಾನ;

(ಕ್ಯೂ) ಬೀದಿಬದಿ ವ್ಯಾಪಾರಿಯನ್ನು ಹೊರಹಾಕುವುದು ವಿಫಲವಾದಾಗ ದೈಹಿಕವಾಗಿ ಅವನನ್ನು ಹೊರಹಾಕುವ ವಿಧಾನ;

(ಆರ್) ಸ್ಥಳೀಯ ಪ್ರಾಧಿಕಾರವು, ವಶಕ್ಕೆ ತೆಗೆದುಕೊಂಡ ಸರಕುಗಳ ಪಟ್ಟಿಯನ್ನು ಸಿದ್ಧಪಡಿಸುವುದು ಮತ್ತು ನೀಡಿಕೆಯು ಒಳಗೊಂಡಂತೆ ಸರಕುಗಳನ್ನು ವಶಕ್ಕೆ ತೆಗೆದುಕೊಳ್ಳುವ ವಿಧಾನ;

(ಎಸ್) ರಸ್ತೆ ಬದಿ ವ್ಯಾಪಾರಿಗಳಿಂದ ವಶಕ್ಕೆ ತೆಗೆದುಕೊಂಡ ಸರಕುಗಳನ್ನು ಮರುಕ್ಲೇಮು ಮಾಡುವ ವಿಧಾನ ಮತ್ತು ಅದಕ್ಕಾಗಿ ಫೀಜುಗಳು;

(ಟಿ) ಪಟ್ಟಣ ವ್ಯಾಪಾರ ಸಮಿತಿಯ ಸಾಮಾಜಿಕ ಲೆಕ್ಕಪರಿಶೋಧನೆ ಚಟುವಟಿಕೆಗಳನ್ನು ನಡೆಸುವುದಕ್ಕಾಗಿ ನಮೂನೆ ಮತ್ತು ವಿಧಾನ;

(ಯು) ಯಾವ ಪರಿಸ್ಥಿತಿಗಳಲ್ಲಿ ಯಾವುದೇ ಖಾಸಗಿ ಸ್ಥಳಗಳನ್ನು ನಿರ್ಬಂಧಮುಕ್ತ ವ್ಯಾಪಾರ ವಲಯಗಳು, ನಿರ್ಬಂಧಿತ ವ್ಯಾಪಾರ ವಲಯಗಳು ಮತ್ತು ವ್ಯಾಪಾರೇತರ ವಲಯಗಳೆಂದು ಗೊತ್ತುಪಡಿಸಬಹುದೋ ಆ ಪರಿಸ್ಥಿತಿಗಳು;

(ವಿ) ಸಾರ್ವಜನಿಕ ಆರೋಗ್ಯವನ್ನು ಮತ್ತು ನೈರ್ಮಲ್ಯವನ್ನು ಕಾಪಾಡುವುದಕ್ಕಾಗಿ ಪಾಲಿಸಬೇಕಾದ ವಿಧಿವಿಧಾನಗಳು ಒಳಗೊಂಡಂತೆ, ಬೀದಿಬದಿ ವ್ಯಾಪಾರಕ್ಕಾಗಿನ ನಿಬಂಧನೆಗಳು ಮತ್ತು ಷರತ್ತುಗಳು;

(ಡಬ್ಲ್ಯೂ) ರಾಜ್ಯ ಮಟ್ಟದಲ್ಲಿ ಬೀದಿಬದಿ ವ್ಯಾಪಾರಕ್ಕೆ ಸಂಬಂಧಿಸಿದ ಎಲ್ಲಾ ವಿಷಯಗಳನ್ನು ಸಮನ್ವಯಗೊಳಿಸುವುದಕ್ಕಾಗಿ ರಾಜ್ಯ ನೋಡೆಲ್ ಅಧಿಕಾರಿಯನ್ನು ಗೊತ್ತುಪಡಿಸುವುದು;

(ಎಕ್ಸ್) ಬೀದಿಬದಿ ವ್ಯಾಪಾರಿಗಳಿಗೆ ಸಂಬಂಧಿಸಿದಂತೆ ಪಟ್ಟಣ ವ್ಯಾಪಾರ ಸಮಿತಿಯು, ಸ್ಥಳೀಯ ಪ್ರಾಧಿಕಾರವು, ಯೋಜನಾ ಪ್ರಾಧಿಕಾರವು ಮತ್ತು ರಾಜ್ಯ ನೋಡೆಲ್ ಅಧಿಕಾರಿಯು ಯುಕ್ತ ದಾಖಲೆಗಳನ್ನು ಮತ್ತು ಇತರೆ ದಸ್ತಾವೇಜುಗಳನ್ನು ನಿರ್ವಹಿಸುವ ವಿಧಾನ;

(ವೈ) ವ್ಯಾಪಾರ ಕಾರ್ಯಚಟುವಟಿಕೆಗಳನ್ನು ಸಮಯ–ಹಂಚಿಕೆಯ ಆಧಾರದ ಮೇಲೆ ನಡೆಸುವ ವಿಧಾನ;

(ಝಡ್) ವ್ಯಾಪಾರ ವಲಯಗಳನ್ನು, ನಿರ್ಬಂಧಮುಕ್ತ ವ್ಯಾಪಾರ ವಲಯಗಳು, ನಿರ್ಬಂಧಿತ ವ್ಯಾಪಾರ ವಲಯಗಳು ಮತ್ತು ವ್ಯಾಪಾರೇತರ ವಲಯಗಳೆಂದು ನಿರ್ಧರಿಸುವುದಕ್ಕಾಗಿನ ತತ್ವಗಳು;

(ಝಡ್ಎ) ವ್ಯಾಪಾರ ವಲಯಗಳ ಧಾರಣ ಸಾಮರ್ಥ್ಯವನ್ನು ನಿರ್ಧರಿಸುವುದಕ್ಕಾಗಿ ತತ್ವಗಳನ್ನು ಮತ್ತು ಸಮಗ್ರ ಗಣತಿ ಮತ್ತು ಸಮೀಕ್ಷೆಯನ್ನು ವ್ಯಾಪಕವಾಗಿ ಕೈಗೊಳ್ಳುವ ವಿಧಾನ;

(ಝಡ್ಬಿ) ಈ ಕೆಳಗಿನ ತತ್ವಗಳಿಗೆ ಒಳಪಟ್ಟು ಸ್ಥಳಾಂತರ ಮಾಡುವ ತತ್ವಗಳು,–

(i) ಪ್ರಶ್ನಿತ ಭೂಮಿಗಾಗಿ ಸ್ಪಷ್ಟ ಮತ್ತು ತುರ್ತು ಅಗತ್ಯತೆ ಇದ್ದ ಹೊರತು, ಸಾಧ್ಯವಾದಷ್ಟು ಮಟ್ಟಿಗೆ ಸ್ಥಳಾಂತರವನ್ನು ತಪ್ಪಿಸತಕ್ಕದ್ದು;

(ii) ಪುನರ್ ವಸತಿ ಪರಿಯೋಜನೆಯನ್ನು ಯೋಜಿಸುವಲ್ಲಿ ಮತ್ತು ಅನುಷ್ಠಾನಗೊಳಿಸುವಲ್ಲಿ ಬಾಧಿತ ವ್ಯಾಪಾರಿಗಳು ಅಥವಾ ಅವರ ಪ್ರತಿನಿಧಿಗಳನ್ನು ಸೇರಿಸಿಕೊಳ್ಳತಕ್ಕದ್ದು;

(iii) ಬಾಧಿತ ವ್ಯಾಪಾರಿಗಳು, ತಮ್ಮ ಜೀವನೋಪಾಯಗಳನ್ನು ಮತ್ತು ಜೀವನ ಗುಣಮಟ್ಟಗಳನ್ನು ಸುಧಾರಿಸಿಕೊಳ್ಳುವಂತೆ ಸ್ಥಳಾಂತರ ಮಾಡುವುದು ಅಥವಾ ಅವರನ್ನು ಹೊರಹಾಕುವ ಪೂರ್ವಸ್ಥಿತಿಯಲ್ಲಿದ್ದ ಮಟ್ಟದ ವಾಸ್ತವಿಕ ಪೂರ್ವಸ್ಥಿತಿಗಾದರೂ ತರುವುದು;

(iv) ಹೊಸ ಮೂಲಭೂತ ಸೌಕರ್ಯಾಭಿವೃದ್ಧಿ ಪರಿಯೋಜನೆಗಳ ಮೂಲಕ ಸೃಜಿಸಲಾದ ಜೀವನೋಪಾಯಗಳ ಅವಕಾಶಗಳಲ್ಲಿ, ಈಗಾಗಲೇ ಸ್ಥಳಾಂತರಗೊಂಡಿದ್ದ ವ್ಯಾಪಾರಿಗಳಿಗೆ ಅವಕಾಶ ಮಾಡಿಕೊಡುವುದರಿಂದ ಹೊಸ ಮೂಲಭೂತ ಸೌಕರ್ಯಗಳ ಮೂಲಕ ಸೃಜಿತವಾದ ಜೀವನೋಪಾಯಗಳ ಅವಕಾಶಗಳನ್ನು ಅವರು ಬಳಸಿಕೊಳ್ಳಬಹುದು;

(v) ಆಸ್ತಿಗಳ ನಷ್ಟವನ್ನು ತಪ್ಪಿಸತಕ್ಕದ್ದು ಮತ್ತು ಯಾವುದೇ ನಷ್ಟದ ಸಂದರ್ಭದಲ್ಲಿ ಪರಿಹಾರವನ್ನು ನೀಡತಕ್ಕದ್ದು;

(vi) ಭೂಮಿಯಲ್ಲಿ ಯಾವುದೇ ಹಕ್ಕುಸ್ವಾಮ್ಯದ ಅಥವಾ ಇತರ ಹಿತಾಸಕ್ತಿಯ ವರ್ಗಾವಣೆಯು, ಅಂಥ ಭೂಮಿಯ ಮೇಲೆ ಬೀದಿಬದಿ ವ್ಯಾಪಾರಿಗಳ ಹಕ್ಕುಗಳನ್ನು ಬಾಧಿಸತಕ್ಕದ್ದಲ್ಲ ಮತ್ತು ಅಂಥ ವರ್ಗಾವಣೆಯ ಪರಿಣಾಮವಾಗಿ ಮಾಡಿದ ಯಾವುದೇ ಸ್ಥಳಾಂತರವನ್ನು ಈ ಅಧಿನಿಯಮದ ಉಪಬಂಧಗಳಿಗನುಸಾರವಾಗಿ ಮಾಡತಕ್ಕದ್ದು;

(vii) ರಾಜ್ಯಾಡಳಿತ ವ್ಯವಸ್ಥೆಯು, ಒತ್ತಾಯಪೂರ್ವಕ ಹೊರಹಾಕುವಿಕೆಯ ಪದ್ಧತಿಯನ್ನು ತಡೆಯುವುದಕ್ಕೆ ಮತ್ತು ನಿಯಂತ್ರಿಸುವುದಕ್ಕೆ ವ್ಯಾಪಕ ಕ್ರಮಗಳನ್ನು ಕೈಗೊಳ್ಳತಕ್ಕದ್ದು;

(viii) ಐವತ್ತು ವರ್ಷಗಳಿಗಿಂತಲೂ ಹೆಚ್ಚು ವರ್ಷಗಳಿಂದ ತಮ್ಮ ವ್ಯಾಪಾರವನ್ನು ನಡೆಸುತ್ತಿರುವ ಬೀದಿಬದಿ ವ್ಯಾಪಾರಿಗಳಿರುವ ಸ್ವಾಭಾವಿಕ ಮಾರುಕಟ್ಟೆಗಳನ್ನು ಪರಂಪರಾಗತ ಮಾರುಕಟ್ಟೆಗಳೆಂದು ಘೋಷಿಸತಕ್ಕದ್ದು ಮತ್ತು ಅಂಥ ಮಾರುಕಟ್ಟೆಗಳಲ್ಲಿರುವ ಬೀದಿಬದಿ ವ್ಯಾಪಾರಿಗಳನ್ನು ಸ್ಥಳಾಂತರ ಮಾಡತಕ್ಕದ್ದಲ್ಲ.

(ಝಡ್ಸಿ) ಈ ಅಧಿನಿಯಮದ ಉದ್ದೇಶಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ಸ್ಕೀಮ್‌ನಲ್ಲಿ ಒಳಗೊಳ್ಳಬಹುದಾದಂಥ ಇತರೆ ಯಾವುದೇ ವಿಷಯ.